# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXIII - 5 ಮೇ 2005

### ಈ ಸಂಚಿಕೆಯಲ್ಲಿ



| | | |
|---|---|---|
| ಶ್ರೀ ಶಂಕರ ಭಗವತ್ಪಾದರು | ● ಬಿ. ನಾಗಭೂಷಣ್ | 2 |
| ಕೃತಿ ಸಮೀಕ್ಷೆ :<br>ಬೇಂದ್ರೆ ಜಗತ್ತಿಗೆ ಮತ್ತೊಂದು ಬಾಗಿಲು | ● ಡಾ. ಜಿ.ಎನ್. ಉಪಾಧ್ಯ | 4 |
| ಸ್ತ್ರೀಯ ಮೇಲೆ ಆಗುತ್ತಿರುವ ಅನ್ಯಾಯ ಅತ್ಯಾಚಾರಗಳು | ● ಶ್ರೀಮತಿ ಪ್ರಮಿಳಾ ಕುಲಕರ್ಣಿ | 5 |
| Forthcoming Programmes | | 6 |
| ಕರ್ನಾಟಕ - ಮಹಾರಾಷ್ಟ್ರ ಸಾಂಸ್ಕೃತಿಕ ಬಾಂಧವ್ಯ | ● ಡಾ. ಜಿ.ಎನ್. ಉಪಾಧ್ಯ | 7 |
| A PRAYER | ● **Mrs. Janaki S. Mani** | 9 |
| ಸುತ್ತಮುತ್ತ | | 10 |


**Rs. 5/-**

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

# ಶ್ರೀ ಶಂಕರ ಭಗವತ್ಪಾದರು

ದಿನಾಂಕ 13-5-2005ರಂದು ಶ್ರೀ ಶಂಕರಾಚಾರ್ಯರ ಜಯಂತಿಯನ್ನು ದೇಶಾದ್ಯಂತ ಆಚರಿಸಲ್ಪಡುತ್ತದೆ. ಈ ಸಂದರ್ಭದಲ್ಲಿ ಸಿದ್ಧಪಡಿಸಿದ ಭಕ್ತಿಪೂರ್ವಕ ಲೇಖನ. - ಬಿ. ನಾಗಭೂಷಣ್



ಪ್ರಪಂಚದ ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲೊಂದಾದ ನಮ್ಮ ಭಾರತೀಯ ಸಂಸ್ಕೃತಿಯು ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದಿದೆ. ಗ್ರೀಸ್, ರೋಂ, ಈಜಿಪ್ಟ್, ಬ್ಯಾಬಿಲೋನ್ ಮೊದಲಾದ ದೇಶಗಳು ಪ್ರಭಾವಯುತವಾದ ಸಂಸ್ಕೃತಿಗಳನ್ನು ಪಡೆದಿದ್ದರೂ, ಕಾಲಕ್ರಮದಲ್ಲಿ ಅವೆಲ್ಲಾ ಕ್ಷೀಣಿಸಿ ಅಲ್ಲಿನ ಅವಶೇಷಗಳು ಕೇವಲ ಜನರ ಸ್ಮರಣೆಯಲ್ಲಿ ಮಾತ್ರ ಉಳಿದಿವೆ. ಭಾರತೀಯ ಸಂಸ್ಕೃತಿಯ ಮೇಲೆ ಪಾರ್ಸಿ, ಗ್ರೀಕ್, ಚೀಣಿ, ಮಹಮದೀಯ ಮತ್ತು ಐರೋಪ್ಯ ಸಂಸ್ಕೃತಿಯ ಧಾಳಿಗಳು ಕಾಲಕಾಲಕ್ಕೆ ನಡೆಯುತಾದರೂ ಅವುಗಳನ್ನೆಲ್ಲಾ ಎದುರಿಸಿ ತನ್ನ ಆತ್ಮ ಶಕ್ತಿಯನ್ನು ಪ್ರದರ್ಶಿಸಿ, ಇಡೀ ಜಗತ್ತಿಗೆ ನಿತ್ಯ ನವ ಸಂದೇಶವನ್ನೂ, ಚೈತನ್ಯವನ್ನು ನೀಡುವ ಅದ್ಭುತ ಶಕ್ತಿ ಪಡೆದಿದೆ. ಭಾರತೀಯ ಸಂಸ್ಕೃತಿಯ ಈ ನಿತ್ಯ ನವಚೈತನ್ಯದ ರಹಸ್ಯವು ಸರ್ವ ಧರ್ಮ ಸಮನ್ವಯ, ಸರ್ವ ಧರ್ಮ ಸಹಿಷ್ಣುತೆ, ಸರ್ವಸಮ ಜೀವಕೆಗಳೇ ಆಧಾರವಾದ ಸನಾತನ ಧರ್ಮದಲ್ಲಿ ಅಡಗಿದೆ. ಈ ಸನಾತನ ಧರ್ಮಕ್ಕೆ ಅಂತರಿಕವಾಗಿ ಶಾಕ್ತರು. ಕಾಪಾಲಿಕರು, ಬೌದ್ಧರು, ಚಾರ್ವಾಕರು, ವಾಮಾಚಾರಿಗಳು ಇವರುಗಳಿಂದ ಉಪಟಳ ಹೆಚ್ಚಾಗಿ. ವಿನಾಶಾತ್ಮಕವಾದ ಚಳುವಳಿ ನಡೆಯುತ್ತಿರುವಾಗ ಸನಾತನ ಧರ್ಮವನ್ನು ಮತ್ತೆ ಅದರ ಉಚ್ಚ ಪೀಠದಲ್ಲಿ ಸ್ಥಾಪಿಸುವ ಕಾರ್ಯ ಅನಿವಾರ್ಯವಾದಾಗ ಸನಾತನ ಧರ್ಮದ ಅಭ್ಯುತ್ಥಾನಕ್ಕಾಗಿಯೋ ಎಂಬಂತೆ ಶ್ರೀ ಆದಿ ಶಂಕರರ ಅವತಾರವಾಯಿತು.

### ಸಂಕ್ಷಿಪ್ತ ಜೀವನ ಪರಿಚಯ

ಕೇರಳ ರಾಜ್ಯದ ಕಾಲಟಿ ಎಂಬ ಗ್ರಾಮದಲ್ಲಿ ಶಿವಗುರು ಆರ್ಯಾಂಬೆ ಇವರ ಪುತ್ರರಾಗಿ ಶಂಕರರು ಜನಿಸಿದರು. ಬಾಲ್ಯದಲ್ಲಿ ಪಿತೃವಿಯೋಗವಾಯಿತು. ಎಂಟು ವರ್ಷಗಳಿಗೆಲ್ಲಾ ವಿದ್ಯಾ ವಿವೇಕ ಪಾಂಡಿತ್ಯದಲ್ಲಿ ನಿಸ್ಸೀಮರಾದರು. ತಾನು ಮುಂದೆ ಮಾಡಬೇಕಾಗಿರುವ ಕಾರ್ಯವನ್ನೂ ಮನಗಂಡು ತಾಯಿಯನ್ನೂ ಒಪ್ಪಿಸಿ, ಅಪ್ಪಣೆ ಪಡೆದು ಸನ್ಯಾಸವನ್ನು ಸ್ವೀಕರಿಸಿದರು. ಮಾಂಧಾರ್ಂತ ಪರ್ವತದಲ್ಲಿ ವಾಸಿಸುತ್ತಿದ್ದ ಶ್ರೀ ಗೋವಿಂದ ಭಗವತ್ಪಾದಾಚಾರ್ಯರಲ್ಲಿಗೆ ತೆರಳಿ, ಅವರಿಂದ ಉಪದೇಶ ಪಡೆದು ಸನ್ಯಾಸ ದೀಕ್ಷೆಯನ್ನು ಪಡೆದು ''ಶಂಕರ ಭಗವತ್ಪೂಜ್ಯಪಾದ''ರೆನಿಸಿ, ಗುರುಗಳ ಆದೇಶದಂತೆ ದೇಶ ಪರ್ಯಟನೆ ಮಾಡಲು ಹೊರಟರು. ದೇಶ ಪರ್ಯಟನೆ ಮಾಡುತ್ತಾ, ಮಾಹಿಷ್ಮತೀ ನಗರಕ್ಕೆ ಬಂದರು. ಅಲ್ಲಿ ಕರ್ಮ ಕಾಂಡವನ್ನೂ ಉದ್ಧರಿಸಲು ಕಂಕಣ ಬದ್ಧರಾಗಿದ್ದ ಮಂಡನ ಮಿಶ್ರರನ್ನು ಭೇಟಿ ಮಾಡಿ ವಾದ ಭಿಕ್ಷೆಯನ್ನು ಬೇಡಿದರು. ಅದಕ್ಕೆ ಸಮ್ಮತಿಸಿದ ಮಂಡನ ಮಿಶ್ರರಿಗೂ, ಶಂಕರರಿಗೂ ಶಾಸ್ತ್ರಾಧಾರಿತವಾದ ವಾದ ಪ್ರತಿವಾದಗಳು ಪ್ರಾರಂಭವಾಯಿತು. ವಾದದ ಜಯಾಪಜಯಗಳನ್ನು ತೀರ್ಮಾನಿಸಲು ಮಂಡನ ಮಿಶ್ರರ ಪತ್ನಿ ಸರಸ್ವತೀ ಅವತಾರವೆನಿಸಿದ ಉಭಯ ಭಾರತಿಯನ್ನು ನೇಮಕ ಮಾಡಲಾಯಿತು.

ಕರ್ಮವೇ ಮೋಕ್ಷಕ್ಕೆ ಸಾಧನವೆಂದು ಮಂಡನ ಮಿಶ್ರರೂ, ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಶಂಕರರೂ ಹದಿನಾರು ದಿನಗಳ ಕಾಲ ವಾದ ಮಾಡಿದರು. ಶಂಕರರು ಮೋಕ್ಷಕ್ಕೆ ಜ್ಞಾನವೇ ಸಾಕ್ಷಾತ್ಕಾರವು. ಒಳ್ಳೆಯ ಕಟ್ಟಡಕ್ಕೆ ಬಲವಾದ ತಳಹದಿ ಹೇಗೆ ಅವಶ್ಯಕವೋ ಹಾಗೆ ಜ್ಞಾನ ಸಾಧನೆಗೆ ಮುಖ್ಯವಾದ ತಳಹದಿ ಚಿತ್ತಶುದ್ಧಿ. ನಿಷ್ಕಾಮದಿಂದಲೂ, ಈಶ್ವರಾರ್ಪಣ ಬುದ್ಧಿಯಿಂದಲೂ ಮಾಡಿದ ಕರ್ಮದಿಂದಲೇ ಚಿತ್ತ ಶುದ್ಧಿ ಉಂಟಾಗುವುದು. ಅದಕ್ಕಾಗಿ ಕರ್ಮವನ್ನು ಆಚರಿಸಬೇಕು. ಕರ್ಮವು ಚಿತ್ತ ಶುದ್ಧಿಗೆ ಮಾತ್ರ. ಬ್ರಹ್ಮಸಾಕ್ಷಾತ್ಕಾರಕ್ಕೆ ಅಲ್ಲ. ಬ್ರಹ್ಮ ಸಾಕ್ಷಾತ್ಕಾರವು ವಿಚಾರದಿಂದಲೇ ಲಭಿಸತಕ್ಕದ್ದು ಎಂಬುದನ್ನು ಶಂಕರರು ಶ್ರುತಿ, ಸ್ಮೃತಿ, ಪುರಾಣಗಳ ಆಧಾರದಿಂದ ಪ್ರಮಾಣಿಸಿದರು. ಕೊನೆಗೆ ಮಂಡನ ಮಿಶ್ರರು ಪರಾಜಯವನ್ನು ಒಪ್ಪಬೇಕಾಯಿತು. ಆದರೆ ಶಂಕರರ ಜಯ ಪೂರ್ಣವಾಗಲಿಲ್ಲವೆಂದೂ ಮಂಡನ ಮಿಶ್ರರ ಅರ್ಧಾಂಗಿಯಾದ ತನ್ನನ್ನು ವಾದದಲ್ಲಿ ಸೋಲಿಸಿದರೆ ಪೂರ್ಣ ಜಯ ಉಂಟೆಂದು ಉಭಯ ಭಾರತಿ ಸಾರಿದಳು. ಶಂಕರರು ಒಪ್ಪಿ ಉಭಯ ಭಾರತಿಯೊಡನೆ ವಾದಕ್ಕಿಳಿದಳು. ಬಹಳ ಕಾಲದವರೆಗೆ ನಡೆದ ಈ ವಾದದಲ್ಲಿ ಶಂಕರರದೇ ಮೇಲುಗೈ ಆಗುತ್ತಿರುವುದನ್ನು ಕಂಡು ಉಭಯ ಭಾರತಿಯು ಶಂಕರರನ್ನು ಕಾಮ ಶಾಸ್ತ್ರದ ವಿಚಾರದಲ್ಲಿ ಪ್ರಶ್ನೆ ಕೇಳಿದಳು. ಸಂಕಟಕ್ಕೀಡಾದ ಶಂಕರರು ಉಭಯ ಭಾರತಿ ಪ್ರಶ್ನೆಗೆ ಉತ್ತರಿಸಲು ಒಂದು ತಿಂಗಳು ಅವಧಿಯನ್ನು ಪಡೆದು, ಪೂರ್ವಜ ದೇಶದ ಅಮರುಕ ರಾಜನು ಮರಣ ಹೊಂದಿರುವುದನ್ನು ತಮ್ಮ ಯೋಗ ದೃಷ್ಟಿಯಿಂದ ತಿಳಿದು ಆತನ ದೇಹದೊಳಗೆ ಪರಕಾಯ ಪ್ರವೇಶ ಮಾಡಿ ರಾಜನ ಅಂತಃಪುರದಲ್ಲಿದ್ದು ಉಭಯ ಭಾರತಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು ಹಿಂದಿರುಗಿದರು. ಅವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಉಭಯ ಭಾರತಿ ಶಂಕರರು ತನ್ನ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗಿದ್ದಾರೆಂದು ತಿಳಿದು ಸಂತೋಷದಿಂದ ತನ್ನ ಸೋಲೊಪ್ಪಿದಳು. ಹೀಗೆ ಶಂಕರರು ಮಂಡನ ಮಿಶ್ರರನ್ನು ಪರಾಜಯಗೊಳಿಸಿ ಅವರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು.

ಶಂಕರರು ತತ್ತ್ವೋಪದೇಶ ಮಾಡುತ್ತಾ ಅನೇಕ ಶಿಷ್ಯರನ್ನು ಸಂಪಾದಿಸಿ, 20ನೇ ವಯಸ್ಸಿಗಾಗಲೇ ಭಾಷ್ಯಕಾರರೆನಿಸಿ ಖ್ಯಾತರಾದರು. ನಂತರ ವೇದ ವ್ಯಾಸರ ಆದೇಶದಂತೆ ದಿಗ್ವಿಜಯಕ್ಕಾಗಿ ಲೋಕ ಸಂಚಾರ ಕೈಗೊಂಡರು.

### ಶಂಕರರ ದಿಗ್ವಿಜಯ

ಶಂಕರರು ತಮ್ಮ ಶಿಷ್ಯರೊಡಗೂಡಿ ಭಾರತ ಭೂಮಿಯನ್ನೆಲ್ಲಾ ಸಂಚರಿಸಿ ಜ್ಞಾನೋಪದೇಶ ಮಾಡುತ್ತಾ ಶ್ರೀಶೈಲ ಕ್ಷೇತ್ರವನ್ನು ತಲುಪಿ ಅಲ್ಲಿ ಸುರಪಾನಸಕ್ತರಾದ ಕಾಪಾಲಿಕರನ್ನು ಸಂದರ್ಶಿಸಿ, ಅವರಿಗೆ ಅನೇಕ ಶಾಸ್ತ್ರಾಧಾರಗಳನ್ನು ತೋರಿಸಿ, ಅವರಲ್ಲಿ ಸನ್ಮಾರ್ಗ ಪ್ರವೃತ್ತಿಯುಂಟಾಗುವಂತೆ ಮಾಡಿದರು. ನಂತರ ಗೋಕರ್ಣಕ್ಕೆ ತೆರಳಿ ಅಲ್ಲಿ

ಗಾಣಪತ್ಯ ಮತದವರಲ್ಲಿದ್ದ ಕೆಟ್ಟ ಚಾಳಿಗಳಿಂದ ಆಗುವ ಅನಾಹುತಗಳನ್ನು ವಿವರಿಸಿ ಸನಾತನ ಧರ್ಮವನ್ನೂ, ಅದ್ವೈತವನ್ನೂ ಬೋಧಿಸಿ ಸುಧಾರಿಸಿದರು.

ಮಧ್ಯಾರ್ಜುನ ಕ್ಷೇತ್ರವನ್ನು ಸೇರಿ ಅಲ್ಲಿದ್ದ ಸೌರ ಮತೀಯ ಆಚರಿಸುತ್ತಿದ್ದ ರಕ್ತಗಂಧಾರ್ಚನೆ ಪದ್ಧತಿಯನ್ನು ಖಂಡಿಸಿ ಧರ್ಮ ಸಾಧನವಾದ ಶರೀರವನ್ನು ಯಾವ ರೀತಿಯಲ್ಲೂ ಕೆಡಿಸಬಾರದೆಂದು ಶಾಸ್ತ್ರಾಧಾರ'ದಿಂದ ತಿಳಿಯಪಡಿಸಿದರು. ಕೊನೆಗೆ ಸೌರ ಮತೀಯರೆಲ್ಲರೂ ಶಂಕರರ ಶಿಷ್ಯರಾಗಿ ಪರಿವರ್ತನೆಗೊಂಡರು. ರಾಮೇಶ್ವರಕ್ಕೆ ಸಾಗುತ್ತಿದ್ದ ಹಾದಿಯಲ್ಲಿ ವೈಷ್ಣವ ಸಂಪ್ರದಾಯದವರಿಂದ ವಾದಕ್ಕಾಗಿ ಬಂದ ಆಹ್ವಾನವನ್ನು ಸ್ವೀಕರಿಸಿ ವಿಷ್ಣುವೇ ಸರ್ವೋತ್ತಮ, ಆ ದೇವನ ಚಿಹ್ನೆಗಳಾದ ಶಂಖ ಚಕ್ರಗಳ ತಪ್ತಮುದ್ರೆಗಳನ್ನು ಧರಿಸಿದರೆ ಮೋಕ್ಷವುಂಟು ಎನ್ನುವ ಅವರ ವಾದವನ್ನು ಖಂಡಿಸಿ ದೇವತೆಗಳಲ್ಲಿ ಒಬ್ಬರು ದೊಡ್ಡವರು, ಒಬ್ಬರು ಚಿಕ್ಕವರು ಎಂಬ ತಾರತಮ್ಯವನ್ನು ಯಾವ ಶೃತಿಗಳೂ ಹೇಳಿಲ್ಲವೆಂಬುದನ್ನು ಶೃತಿ ಪ್ರಮಾಣ ಯುಕ್ತಿ, ಸಮನ್ವಯ ದೃಷ್ಟಿಗಳಿಂದ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿ ತಪ್ತ ಚಿಹ್ನೆಗಳೆಂದರೆ ಜ್ಞಾನಾಗ್ನಿಯಿಂದ ಅಜ್ಞಾತ ಕಲುಷಿತವಾದ ಮನಸ್ಸನ್ನು ಸುಟ್ಟು ಸ್ವಚ್ಛಗೊಳಿಸುವುದಲ್ಲದೆ ಧರ್ಮ ಸಾಧನೆಗೆ ಕಾರಣವಾದ ಶರೀರವನ್ನು ತಪ್ತ ಲೋಹ ಮುದ್ರೆಯಿಂದ ವಿರೂಪಗೊಳಿಸುವುದಲ್ಲ ಎಂದು ತಿಳಿಯಪಡಿಸಿ ವೈಷ್ಣವರು ತಮ್ಮ ದುರಾಗ್ರಹವನ್ನು ತ್ಯಜಿಸುವಂತೆ ಮಾಡಿದರು. ಇದೇ ರೀತಿ ರುದ್ರನೇ ಶ್ರೇಷ್ಠನು ಆತನ ಮೋಕ್ಷ ಸಾಧನೆಗೆ ರುದ್ರನ ಚಿಹ್ನೆಗಳಾದ ತ್ರಿಶೂಲ, ಢಮರುಗ, ತಪ್ತ ಚಿಹ್ನೆಗಳನ್ನು ಅಂಗದಲ್ಲಿ ಧರಿಸಬೇಕು ಎಂದು ವಾದಿಸುತ್ತಿದ್ದ ಶೈವರನ್ನು ವಾದದಲ್ಲಿ ಸೋಲಿಸಿ, ಅವರನ್ನು ಮನವೊಲಿಸಿ ತಪ್ತ ಚಿಹ್ನೆಧಾರಣ ಪದ್ಧತಿಯನ್ನು ತಪ್ಪಿಸಿದರು. ಕಂಚಿಗೆ ತೆರಳಿ ಅಲ್ಲಿ ಕಾಮಾಕ್ಷಿ ದೇವಾಲಯದಲ್ಲಿ ನಡೆಯುತ್ತಿದ್ದ ವಾಮಾಚಾರ ಪದ್ಧತಿಯ, ಪ್ರಾಣಿಬಲಿ ಪದ್ಧತಿಯನ್ನು ತಪ್ಪಿಸಿ, ದೇವಾಲಯದ ದ್ವಾರದಲ್ಲಿ ಚಕ್ರ ಸ್ಥಾಪನೆಮಾಡಿ ವೈದಿಕಾಗಮರೀತ್ಯಾ ಪೂಜಾ ವಿಧಿಗಳು ನಡೆಯುವಂತೆ ಮಾಡಿದರು. ಬ್ರಹ್ಮಪುತ್ರಾ ನದಿಯಿಂದ ಮತೀಯರೊಂದಿಗೆ ವಾಕ್ಯಾರ್ಥ ವಿಚಾರಮಾಡಿ ಅವರಲ್ಲಿದ್ದ ಜಟಾಧಾರಣ ರೂಪದ ಅನಾಚಾರವನ್ನು ತಪ್ಪಿಸಿದರು.

ಹೀಗೆ ಶೈವ, ವೈಷ್ಣವ, ಶಾಕ್ತೇಯ, ಸೌರ, ಗಣಪತ್ಯ ಮತ್ತು ಕಾಪಾಲಿಕ ಈ ಆರು ಮತಗಳಲ್ಲಿನ ದುರಾಚಾರಗಳನ್ನು ಬಿಟ್ಟರೆ ಆ ಮತದ ಸಿದ್ಧಾಂತಗಳೆಲ್ಲವೂ ಒಂದೇ ಎಂದು ಸಮನ್ವಯ ಮಾಡಿ ತೋರಿಸಿ ಕೊಟ್ಟು ''ಷಣ್ಮತಸ್ಥಾಪನಾಚಾರ್ಯ''ರಾದರು.

ಶೃತಿ, ಸ್ಮೃತಿ, ಪುರಾಣಗಳಿಗೂ, ಜ್ಞಾನ ಭಕ್ತಿ ಕರ್ಮ ಮಾರ್ಗಗಳಿಗೂ ಪ್ರಸ್ಥಾನ ತ್ರಯಗಳಾದ ಉಪನಿಷತ್, ಗೀತಾ, ಬ್ರಹ್ಮ ಸೂತ್ರಗಳಿಗೆ ಭಾಷ್ಯವನ್ನು ಬರೆದು ''ಸಮನ್ವಯತೆನ್ನುಂಟು ಮಾಡಿ ಸಮನ್ವಯಾಚಾರ್ಯ''ರೆನಿಸಿದರು.

ಕಾಶ್ಮೀರದಲ್ಲಿರುವ ಶ್ರೀ ಶಾರದಾ ದೇವಾಲಯದ ನಾಲ್ಕು ದಿಕ್ಕಿನ ನಾಲ್ಕು ದ್ವಾರಗಳಲ್ಲಿ, ದಕ್ಷಿಣ ದ್ವಾರ ಇನ್ನೂ ತೆರೆದೇ ಇಲ್ಲ ಎಂಬ ವಾರ್ತೆ ತಿಳಿದು ಕಾಶ್ಮೀರಕ್ಕೆ ಹೊರಟರು. ಅಲ್ಲಿ ಶ್ರೀ ಶಾರದಾ ದೇವಿಯ ಆಲಯದ ದಕ್ಷಿಣ ದ್ವಾರವನ್ನು ತಮ್ಮ ಪ್ರತಿಭೆಯಿಂದ ತೆರೆಯುವಂತೆ ಮಾಡಿದರು. ಆಗ ಅಲ್ಲಿ ಸೇರಿದ್ದ ಎಲ್ಲ ಮತಗಳ ಆಚಾರ್ಯರುಗಳು ಶಂಕರರನ್ನು ವಾದಕ್ಕೆ ಎಳೆದರು. ಸಾಂಖ್ಯರು, ನಯ್ಯಾಯಿಕರು ಕ್ಷಪಣರು, ಕಾಪಿಲರು, ಕಾಣಾದರು ಬೌದ್ಧರು, ಅಣುಮತದವರು ಮೊದಲಾದವರ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನಿತ್ತು ಸರ್ವಜ್ಞನೆನಿಸಿ, ಸರ್ವಜ್ಞ ಪೀಠಾರೋಹಣ ಮಾಡಿ ಜ್ಞಾನ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡರು.

### ಆಮ್ನಾಯ ಪೀಠ ಸ್ಥಾಪನೆ

ಇಲ್ಲಿಗೆ ತಾವು ಮಾಡಬೇಕಾದ ಕಾರ್ಯಗಳೆಲ್ಲವೂ ಮುಗಿದಿದೆ ಎಂದು ಮನಗಂಡು ಸತತ ಧರ್ಮ ಕಾರ್ಯ ಆಚರಣೆಯನ್ನು ಭೂಮಿಯ ಮೇಲೆ ಸ್ಥಿರವಾಗಿ ನೆಲೆಗೊಳಿಸಬೇಕೆಂದು ನಿರ್ಧರಿಸಿ, ಉತ್ತರದಲ್ಲಿ ಬದರೀಕಾಶ್ರಮದಲ್ಲಿ, ಪೂರ್ವದಲ್ಲಿ ಪುರಿ ಜಗನ್ನಾಥ ಕ್ಷೇತ್ರದಲ್ಲಿ ಪಶ್ಚಿಮದಲ್ಲಿ ದ್ವಾರಕೆಯಲ್ಲಿ, ದಕ್ಷಿಣದಲ್ಲಿ ಶೃಂಗಗಿರಿ ಕ್ಷೇತ್ರದಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿ ಕ್ರಮವಾಗಿ ತಮ್ಮ ಶಿಷ್ಯರಾದ ತೋಟಕಾಚಾರ್ಯ ಪದ್ಮಪಾದರು, ಹಸ್ತ ಮಲಾಕಚಾರ್ಯ, ಸುರೇಶ್ವರಾಚಾರ್ಯರನ್ನು ಮಠಾಧೀಪತಿಗಳನ್ನಾಗಿ ಪಟ್ಟಗಟ್ಟಿದರು. ಸುಮಾರು ಸಾವಿರದ ಮುನ್ನೂರು ವರ್ಷಗಳಿಂದ ಈ ನಾಲ್ಕು ಪೀಠಗಳೂ ಧರ್ಮಕಾರ್ಯ ನಿರತವಾಗಿವೆ.

### ಸಂದೇಶ

ಕೈಲಾಸಗಮನರಾದ ಶಂಕರಾಚಾರ್ಯರನ್ನು ಅವರ ಶಿಷ್ಯರುಗಳು ತಮ್ಮ ಕೊನೆಯ ಸಂದೇಶವೇನೆಂದು ತಿಳಿಸಬೇಕೆಂದು ಪ್ರಾರ್ಥಿಸಿದಾಗ ಶಂಕರರು ''ಲೋಕದಲ್ಲಿ ಮನುಷ್ಯನಿಗೆ ಪರಮ ಪುರುಷಾರ್ಥವೆಂದರೆ ಮೋಕ್ಷಸಿದ್ಧಿ. ಅದಕ್ಕೆ ಮುಖ್ಯ ಸಾಧಕ ಜ್ಞಾನ. ಜ್ಞಾನವನ್ನು ಪಡೆಯಲು ಚಿತ್ತಶುದ್ಧಿ ಅವಶ್ಯಕ. ಚಿತ್ತ ಶುದ್ಧಿಗೆ ಅವಶ್ಯಕವಾದ ನಿಷ್ಕಾಮ ಕರ್ಮವನ್ನು ಈಶ್ವರಾರ್ಪಣ ಬುದ್ಧಿಯಿಂದ ಮಾಡಬೇಕು. ಪ್ರತಿಯೊಬ್ಬರೂ ವಿಹಿತ ಕರ್ಮಾಚರಣೆಯಿಂದ ಜ್ಞಾನವನ್ನು ಸಂಪಾದಿಸಿ ವರ್ಣಾಶ್ರಮ ಧರ್ಮಗಳನ್ನು ಪಾಲಿಸುತ್ತಾ ಬಂದರೆ ಮೋಕ್ಷವು ಸಿದ್ಧಿಸುವುದು ಎಂದು ತಿಳಿಯ ಪಡಿಸಿದರು.

### ಶಂಕರರ ವ್ಯಕ್ತಿತ್ವ

ಶ್ರೀ ಶಂಕರರ ವ್ಯಕ್ತಿತ್ವ ಬಹುಮುಖವಾದುದು. ಯೋಗಿಯಾಗಿ, ಜ್ಞಾನಿಯಾಗಿ, ಧರ್ಮೋಪದೇಶಕರಾಗಿ ಸಮಾಜ ಸುಧಾರಕರಾಗಿ ರಾಷ್ಟ್ರ ಸಂಘಟಕರಾಗಿ, ಭಕ್ತರಾಗಿ, ಗ್ರಂಥ ನಿರ್ಮಾಪಕರಾಗಿ, ಕವಿಯಾಗಿ ಶ್ರೀ ಶಂಕರರು ಅಸಾಧಾರಣ ಪ್ರತಿಭೆ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಶಂಕರರು ತಾವು ಮಾಡುತ್ತಿದ್ದ ಆಧ್ಯಾತ್ಮಿಕ ಚಿಂತನೆಯ ಜೊತೆಗೆ ಸತತ ದುಡಿಮೆ ಕಾರ್ಯ ತತ್ಪರತೆಗಳಿಂದ ಅನೇಕ ಮಹಾತ್ಕಾರ್ಯಗಳನ್ನು ಸಾಧಿಸಿದ್ದಾರೆ. ಭರತ ಖಂಡದಲ್ಲಿ ಆವರಿಸಿದ್ದ ಅಶಾಂತಿ ಧಾರ್ಮಿಕ ಕ್ಷೋಭೆಯನ್ನು ಕೊನೆಗಾಣಿಸಿ, ಸುಖಶಾಂತಿಯನ್ನು ನೆಲಗೊಳಿಸಿದರು. ನರಬಲಿ, ಪ್ರಾಣಿಬಲಿ ತಪ್ತ ಚಿಹ್ನೆ ಧಾರಣೆಗಳನ್ನು ತಪ್ಪಿಸಿ ಸಮಾಜ ಸುಧಾರಣೆ ಮಾಡಿದರು. ಕಾಶಿಯಲ್ಲಿ ಚಂಡಾಲನನ್ನು ಸಂಧಿಸಿದಾಗ ಅವನು ಆಡಿದ ಸಮಂಜಸವಾದ ತತ್ವಭರಿತವಾದ ಮಾತುಗಳಿಗೆ ಮೆಚ್ಚಿ ''ಅಂತಹ ಜ್ಞಾನಿಯಾದವನು ಚಂಡಾಲನೇ ಆಗಲಿ, ಬ್ರಾಹ್ಮಣನೇ ಆಗಲಿ ನನಗೆ ಗುರು ಸಮಾನ'' ಎಂದು ಹೇಳುವಷ್ಟು ದೃಷ್ಟಿ ವೈಶಾಲ್ಯ, ಉದಾರನೀತಿ, ವಿಚಾರಪರತೆ ಶಂಕರರಲ್ಲಿ ಇದ್ದವು. ಆಚಾರ್ಯರಲ್ಲಿ ನಾವು ಗಮನಿಸಬೇಕಾದ ಅತ್ಯಾಧುನಿಕವೆಂದು ಹೇಳಬಹುದಾದ ಗುಣವೆಂದರೆ ಅಪಾರವಾದ ದೇಶ ಭಕ್ತಿ, ಪ್ರಜಾವಾತ್ಸಲ್ಯ. ರಾಷ್ಟ್ರೀಯ ಸಂಘಟಕರಾಗಿ ಅವರು ಮಾಡಿರುವ ಕಾರ್ಯ ಅಪಾರ. ಜನಗಳ ಹಿತದ ದೃಷ್ಟಿಯಿಂದ ದೇಶವನ್ನೆಲ್ಲಾ ಅನೇಕ ಬಾರಿ ಸಂಚರಿಸಿದರು. ಆಯಾ ಮತಗಳ ಅನುಯಾಯಿಗಳೇ ಒಪ್ಪುವಂತೆ ಎಲ್ಲಾ ಮತಗಳನ್ನು ಸುಧಾರಿಸಿದರು. ಧರ್ಮ ಕಾರ್ಯಾಚರಣೆಯು ಸ್ಥಿರವಾಗಿ ನೆಲೆಗೊಳಿಸಲೋಸುಗ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಇಷ್ಟದೇವತೆಯ ಮುಖಾಂತರ ಎಲ್ಲರೂ ತಮ್ಮ ಶ್ರೇಯಸ್ಸನ್ನು ಪಡೆದುಕೊಳ್ಳಬೇಕೆಂಬ ಉದಾರ ಮನೋಭಾವದ ಉಪದೇಶವನ್ನಿತ್ತರು. ಇದಕ್ಕೆ ಪೂರಕವೋ ಎಂಬಂತೆ ತಾವು ಸಂದರ್ಶಿಸಿದ ಎಲ್ಲಾ ತೀರ್ಥ ಕ್ಷೇತ್ರಗಳಲ್ಲೂ ಆಯಾ ದೇವತೆಯ ಸ್ತೋತ್ರವನ್ನು ರಚಿಸಿದರು. ಹೀಗೆ ತಮ್ಮ ಅಲ್ಪ ಅವಧಿಯ ಜೀವಿತದಲ್ಲಿ ಶಂಕರರು ಮಾಡಿದ ಸಮಾಜ ಸುಧಾರಣೆ, ರಾಷ್ಟ್ರೀಯ ಸಂಘಟನೆ ಕಾನೂನುಗಳ ಮೂಲಕ ಒಂದೆರಡು ಶತಮಾನಗಳ ಅವಧಿಯಲ್ಲಿ ಕೂಡ ಸಾಧ್ಯವಿಲ್ಲ. ಕಾರಣ ಅವರು ಅನುಸರಿಸಿದ ಮಾರ್ಗ ವಿಚಾರ. ದಯೆ, ಕರುಣೆ, ಕಾನೂನು ಮತ್ತು ಬಲ ಪ್ರಯೋಗವಲ್ಲ. ಅವರು ಅನುಸರಿಸಿದ ಮಾಧ್ಯಮ ಶಾಸ್ತ್ರ. ಶಸ್ತ್ರವಲ್ಲ. ಹೀಗೆ ಒಂದು (ಪುಟ 8ಕ್ಕೆ)

# ಬೇಂದ್ರೆ ಜಗತ್ತಿಗೆ ಮತ್ತೊಂದು ಬಾಗಿಲು

ನಾಕಂಡ ಬೇಂದ್ರೆ
ಜೀವನ ಮತ್ತು ಸಾಹಿತ್ಯ
ಡಾ. ಜೀವಿ ಕುಲಕರ್ಣಿ
ಹರ್ಷ ವರ್ಧನ ಪ್ರಕಾಶನ, ಮುಂಬಯಿ
ಬೆಲೆ ರೂ. 100 ಪುಟ 200
(ದ್ವಿತೀಯ ಮುದ್ರಣ)

ಕನ್ನಡ ಸಾಹಿತ್ಯಕ್ಕೆ ದ.ರಾ. ಬೇಂದ್ರೆ ಅವರ ಕೊಡುಗೆ ಅನನ್ಯವಾದುದು. ಅವರದು ದೈತ್ಯ ಪ್ರತಿಭೆ ಕವಿಯಾಗಿ ವಿಮರ್ಶಕರಾಗಿ ಅನುವಾದಕರಾಗಿ ನಾಟಕಕಾರರಾಗಿ, ಅಪ್ರತಿಮ ವಾಗ್ಮಿಯಾಗಿ ಹೆಸರು ಮಾಡಿದ ಬೇಂದ್ರೆ ನಮ್ಮ ಭಾವಕೋಶದಲ್ಲಿ ಸೇರಿ ಹೋಗಿದ್ದಾರೆ. ಸ್ವರೂಪ, ವಸ್ತು ಮತ್ತು ವೈವಿಧ್ಯತೆಗಳಿಂದ ಬೇಂದ್ರೆ ಅವರ ಕಾವ್ಯ ಬೆರಗುಗೊಳಿಸುವಂಥದ್ದು. ಇಪ್ಪತ್ತನೆಯ ಶತಮಾನದ ಉದ್ದಕ್ಕೂ ಸಾಗಿ ಬಂದ ಬೇಂದ್ರೆ ಕಾವ್ಯ ಚಿಂತನ ಯಾರನ್ನೂ ದಂಗು ಬಡಿಸುವಂಥದ್ದು. ಡಾ. ಜೀವಿ ಕುಲಕರ್ಣಿ ವಿರಚಿತ ''ನಾ ಕಂಡ ಬೇಂದ್ರೆ, ಜೀವನ ಮತ್ತು ಸಾಹಿತ್ಯ'' ಬೇಂದ್ರೆ ಕಾವ್ಯ ವಿಶ್ಲೇಷಣೆಯಲ್ಲಿ ಒಂದು ಗಮನಾರ್ಹ ಕೃತಿ. ''ಬೇಂದ್ರೆಯವರ ಕಾವ್ಯವೇ ಹಾಗೆ. ತೆರೆದಷ್ಟು ತೆರೆ ತೆರೆಯಾಗಿ ಅರ್ಥದ ಪದರುಗಳು ಹೊರಡುತ್ತಲೇ ಇರುತ್ತವೆ'' ಎಂಬ ಡಾ. ಜೀವಿ ಅವರ ಮಾತಿನಲ್ಲಿ ತಥ್ಯವಿದೆ.

ಕವಿಯಾಗಿ ವಿಮರ್ಶಕರಾಗಿ ಯೋಗಾರಾಧಕರಾಗಿ ಹೆಸರು ಮಾಡಿರುವ ಡಾ. ಜೀವಿ ಕುಲಕರ್ಣಿ ಅವರು ಬೇಂದ್ರೆ ಹಾಗೂ ಗೋಕಾಕರನ್ನು ಹತ್ತಿರದಿಂದ ಬಲ್ಲವರು. ಅವರ ಒಡನಾಡಿಯಾಗಿ ತಾವೂ ಬೆಳೆದವರು. ಈ ಇಬ್ಬರು ಮಹನೀಯರೂ ತಮ್ಮ ತಮ್ಮ ಆತ್ಮಕಥೆಯನ್ನು ಬರೆದಿಲ್ಲ. ಆ ಕೆಲಸವನ್ನು ಬಹುಮಟ್ಟಿಗೆ ಜೀವಿ ಅವರು ಪೂರೈಸಿದ್ದಾರೆ. ಈ ಇಬ್ಬರು ಕವಿಗಳ ಪರ್ವತ ಸದೃಶ ವ್ಯಕ್ತಿತ್ವವನ್ನು ರೋಚಕವಾಗಿ ಹಿಡಿದಿಟ್ಟ ಶ್ರೇಯಸ್ಸು ಡಾ. ಕುಲಕರ್ಣಿ ಅವರಿಗೆ ಸಲ್ಲುತ್ತದೆ. ಬೇಂದ್ರೆ ಎಂದೊಡನೆ ಸಹಸ್ರ ತಂತೀ ವೀಣೆ ಬಾರಿಸಿದಂತಾಗುತ್ತದೆ. ಸಾವಿರ ನೆನಪುಗಳು ಒಮ್ಮೆಲೆ ಝೇಂಕರಿಸುತ್ತವೆ. ಬೇಂದ್ರೆ ಒಂದು ಸಾಗರ. ನಮ್ಮ ಪಾತ್ರೆ, ಪಾತ್ರ ಚಿಕ್ಕದು. ಅವರು ಹೇಳಿದ ಅನೇಕ ವಿಷಯ ನಮ್ಮ ನೆನಪಿನ ಪಾತ್ರೆಯಲ್ಲಿ ಉಳಿಯದೆ ಸೋರಿ ಹೋಗಿವೆ. ಗಣಿತ, ವಿಜ್ಞಾನದ ಬಗ್ಗೆ ಗಂಟೆ ಗಟ್ಟಲೆ ನಮಗೆ ಪಾಠ ಹೇಳಿದ್ದಾರೆ. ಆದರೆ ನಮ್ಮ ಯೋಗ್ಯತೆ ಚಿಕ್ಕದು. ನಮ್ಮ ತಲೆಯಲ್ಲಿ ಅವರು ಹೇಳಿದ ಜ್ಞಾನವೆಲ್ಲ ಇಳಿಯಲಿಲ್ಲ'' ಎಂದು ನಮ್ರವಾಗಿ ಹೇಳಿಕೊಂಡಿರುವ ಲೇಖಕರು ಬೇಂದ್ರೆ ಸಾಹಿತ್ಯ ವಿಚಾರವನ್ನು ಇಲ್ಲಿ ಬಹು ಹೃದ್ಯವಾಗಿ ಪಡಿಮೂಡಿಸಿದ್ದಾರೆ. ಈ ಕೃತಿಯನ್ನು ಓದುತ್ತಾ ಹೋದಂತೆ ಬೇಂದ್ರೆ ಅವರ ಉನ್ನತ ವ್ಯಕ್ತಿತ್ವ; ಅವರ ಸಾಹಿತ್ಯದ ವಿರಾಟ ಸ್ವರೂಪ ದರ್ಶನ ನಮಗಾಗುತ್ತದೆ.

ಕನ್ನಡ ನಾಡಿನ ಜನರ ಹೃದಯದ ಮಿಡಿತದೊಂದಿಗೆ ಕವಿ ಬೇಂದ್ರೆ ಒಂದಾದ ಬಗೆ, ಅವರು ಜನಮಾನಸವನ್ನು ಗೆದ್ದ ರೀತಿ, ಅವರ ಸಂಗ, ಸಾನ್ನಿಧ್ಯ, ಒಲವು ನಿಲುವು, ಬೇಕು - ಬೇಡ, ಕಷ್ಟ - ಸುಖ, ಸಿದ್ಧಾಂತ - ಸಂದೇಶ ಹೀಗೆ ಬೇಂದ್ರೆ ಸಾಹಿತ್ಯ ಪ್ರಪಂಚಕ್ಕೆ ಹೀಗೂ ಪ್ರವೇಶಿಸಬಹುದೆಂಬ ಹೊಸ ದಾರಿಯನ್ನು ತೆರೆದು ತೋರಿದ ಡಾ. ಜೀವಿ ಅವರು ನಿಜವಾಗಿಯೂ ಧನ್ಯರು. ''ಬೇಂದ್ರೆಯವರ ಜೀವನವೇ ಒಂದು ಕಾವ್ಯ- ಅವರ ಕಾವ್ಯವೇ ಅವರ ಜೀವನ'' ಎಂಬ ಮಾತು ಪ್ರಸ್ತುತ ಕೃತಿಯಲ್ಲಿ ಚೆನ್ನಾಗಿ ಅಪ್ಪನೆಲೆಯಲಿ ಅನಾವರಣ ಗೊಂಡಿದೆ. ಜೀವಿ ವಿರಚಿತ ಈ ಕೃತಿ ಬೇಂದ್ರೆ ಸಾಹಿತ್ಯದ ಜ್ಞಾಪಕ ಚಿತ್ರ ಶಾಲೆಯಂತಿದೆ.

ಬೇಂದ್ರೆ ಜೀವನ ದರ್ಶನವನ್ನು ಮಾಡಿಕೊಡುವ ಪ್ರಸ್ತುತ ಕೃತಿಯಲ್ಲಿ ಐದು ಅಧ್ಯಾಯಗಳಿದ್ದು ಐವತ್ತಕ್ಕಿಂತ ಹೆಚ್ಚು ಉಪ ಅಧ್ಯಾಯಗಳು ಇಲ್ಲಿವೆ. ಬೇಂದ್ರೆ ಕಾವ್ಯದ ವಿಮರ್ಶೆಯ ಜೊತೆಗೆ ಬೇಂದ್ರೆ ಅವರೊಂದಿಗೆ ನಡೆಸಿದ ಸಾಹಿತ್ಯ ಸಲ್ಲಾಪಗಳನ್ನು ರಸಪೂರ್ಣವಾಗಿ ದಾಖಲಿಸಿದ ಶ್ರೇಯಸ್ಸು ಪ್ರಸ್ತುತ ಜೀವಿ ಅವರಿಗೆ ಸಲ್ಲುತ್ತದೆ. ಕೆಲವು ಘಟನೆಗಳು ಅದೆಷ್ಟು ಸ್ವಾರಸ್ಯ ಪೂರ್ಣವಾಗಿವೆ, ನೋಡಿ

ಬೇಂದ್ರೆಯವರ ಶಿಷ್ಯರಾದ ಗೋಕಾಕರೇ ಬೇಂದ್ರೆಯವರು ಎಂ.ಎ. ಅಭ್ಯಾಸ ಮಾಡುವಾಗ ಶಿಕ್ಷಕರಾಗಿ ದೊರೆತದ್ದು ಒಂದು ದೈವೀ ಚಮತ್ಕಾರ. ಗೋಕಾಕರು ಬಿ.ಎ. ಹಾಗೂ ಎಂ.ಎ. ಪರೀಕ್ಷೆಗಳಲ್ಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಪ್ರಥಮ ವರ್ಗದಲ್ಲಿ ಪ್ರಥಮ ಸ್ಥಾನಗಳಿಸಿ ವಿಕ್ರಮ ಸಾಧಿಸಿದ್ದರು. ಅವರು ಐಚ್ಛಿಕವಾಗಿ ಎರಡು ಪೇಪರ್ ಕನ್ನಡ ಆಯ್ದು ಕೊಂಡದ್ದರಿಂದ ಸ್ನಾತಕೋತ್ತರ ಕನ್ನಡ ಪ್ರಾಧ್ಯಾಪಕರೆಂದು ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದಿದ್ದರು. ಬೇಂದ್ರೆ ಅವರ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದರೆ ಇಂಥ ಪ್ರಸಂಗವನ್ನು ಒಟ್ಟುಕೊಡುತ್ತಿದ್ದರು. ಆದರೆ ಬೇಂದ್ರೆಯವರು ಎಲ್ಲವನ್ನು ಭಗವದನುಗ್ರಹವೆಂದೇ ಬಾವಿಸಿದ್ದರು. ಶೀತೋಷ್ಣ ಸುಖ ದುಃಖಗಳನ್ನು ಸಮಾನವಾಗಿ ಎದುರಿಸಿದ ಸ್ಥಿತಪ್ರಜ್ಞರು. ಇದೂ ಒಂದು ಭಗವಂತನ ಲೀಲೆ ಎಂದೇ ತಿಳಿಸಿದರು. ಗೋಕಾಕರೇ ತಮ್ಮ ಅನುಭವವನ್ನು ಹೀಗೆ ಹೇಳಿದ್ದಾರೆ. ''ಕ್ಲಾಸ್ ರೂಮಿಗೆ ಹೋಗುವವರೆಗೆ ನಾನು ಶಿಕ್ಷಕ, ಬೇಂದ್ರೆ ವಿದ್ಯಾರ್ಥಿ. ಆದರೆ ಹೋದ ಮೇಲೆ ಅವರು ಗುರುಸ್ಥಾನದಲ್ಲಿ ಕೂಡುತ್ತಿದ್ದರು. ನಾನು ಶಿಷ್ಯಾ ಸ್ನೇಹಂ ಎಂದು ಎದುರು ಕುಳಿತುಕೊಳ್ಳುತ್ತಿದ್ದೆ. ಅವರೇ ಸಾಹಿತ್ಯದ ವಿಷಯವಾಗಿ ಭಾಷಣ ಮಾಡುತ್ತಿದ್ದರು. ನನಗೆ ಅದರಿಂದ ಅತ್ಯಧಿಕ ಲಾಭವಾಯಿತು. ಕನ್ನಡದಲ್ಲಿ ಸುನೀತ (ಸೊನೆಟ್) ಬರೆಯಲು ನಾವಿಬ್ಬರೂ ಪ್ರಯೋಗ ಮಾಡಿದವು. ನನ್ನ ಅಭ್ಯುದಯದ ಸುನೀತಗಳೆಲ್ಲ ಇದೇ ಕಾಲದಲ್ಲಿ ಜನಿಸಿದವು'' (ಪು 23)

1944 ಮತ್ತೊಂದು ಮಹತ್ವದ ವರ್ಷ. ಸೊಲ್ಲಾಪುರದ ಡಿಎವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಜಾಗ ಅವರ ದಾರಿ ಕಾಯುತಿತ್ತು. ಕನ್ನಡ ನಾಡಿನ ಅನರ್ಘ್ಯ ರತ್ನ, ಹಿರಿಹೊಳೆಯ ಗಂಗೆ ಮಹಾರಾಷ್ಟ್ರದ ಗಡಿಗೆ ಹರಿಯಿತು. ಜ್ಞಾನ ಗಂಗೆ ಹೊರನಾಡಿಗೆ ಹೋಯಿತೆಂದು ಕರ್ನಾಟಕದವರು ನಿಟ್ಟುಸಿರಿಟ್ಟರು. ಈ ನಿಧಿ ತಮಗೆ ದೊರಕಿತಲ್ಲ ಎಂದು ಮಹಾರಾಷ್ಟ್ರದ ಜನ ಅಭಿಮಾನಪಟ್ಟರು. ಬೇಂದ್ರೆ ಸೊಲ್ಲಾಪುರದಲ್ಲಿ ಕಳೆದಂಥ ಹನ್ನೆರಡು ವರ್ಷಗಳು ಕಾವ್ಯ ಕೃಷಿಯ ದೃಷ್ಟಿಯಿಂದ ಮಹತ್ವದವು. ಬೇಂದ್ರೆ ಇಲ್ಲಿ ಕನ್ನಡ ಸಾಹಿತ್ಯದ ಕೃಷಿಯೊಂದಿಗೆ ಮರಾಠಿಯಲ್ಲಿ ಕೂಡಾ ಸಾಹಿತ್ಯ ರಚನೆ ಮಾಡಿದರು. ಬೇಂದ್ರೆಯವರು ಕನ್ನಡ ಪ್ರಾಧ್ಯಾಪಕರಾದರೂ ಸೊಲ್ಲಾಪುರದ ಪ್ರತಿಭಾವಂತ ಮರಾಠಿ ವಿದ್ಯಾರ್ಥಿಗಳು ಬೇಂದ್ರೆಯವರಿಂದ ಆಕರ್ಷಿತರಾದರು. ಸ್ಫೂರ್ತಿ ಪಡೆದವರು. ಬೇಂದ್ರೆಯವರ ಕೀರ್ತಿಯನ್ನು ಮಹಾರಾಷ್ಟ್ರದ ಮೂಲೆ ಮೂಲೆಗೂ ಹಬ್ಬಿಸಿದರು. ಬೇಂದ್ರೆಯವರಿಗೆ 'ಸಂವಾದ' ಎಂಬ ಮರಾಠಿ ಗ್ರಂಥ ರಚನೆಗೆ ಕೇಳಕರ ಪ್ರಶಸ್ತಿಯೂ ಬಂದಿತು!

ಮುಂಬೈಗೆ ಬಂದ ಹೊಸತರಲ್ಲಿ ನಾನು ಇಲ್ಲಿ ಹಿರಿಯ ಸಾಹಿತಿಗಳ, ಕಲಾವಿದರ ಪರಿಚಯ ಮಾಡಿಕೊಂಡೆ. ಹಿರಿಯ ಕಲಾವಿದ ಕೆ. ಕೆ. ಹೆಬ್ಬಾರರಿಗೆ ಬೇಂದ್ರೆ ಅವರ ಮೇಲೆ ಬಹಳ ಮಮತೆಯಿತ್ತು. ಆದರೆ ಅವರು ಬೇಂದ್ರೆ ಅವರನ್ನು ಭೇಟಿಯಾಗಿರಲಿಲ್ಲ. ಒಮ್ಮೆ ಬೇಂದ್ರೆ ಅವರನ್ನು ಹೆಬ್ಬಾರರ ಮನೆಗೆ ಕರೆದುಕೊಂಡು ಹೋದೆ. ಅದೇ ದಿನ ಶಿವರಾಮ ಕಾರಂತರೂ ದೆಹಲಿಯ ಪ್ರವಾಸ ಮುಗಿಸಿ ಹೆಬ್ಬಾರರಲ್ಲಿಗೆ ಬಂದಿದ್ದರು. ಊಟದ ಟೇಬಲ್ ಮೇಲೆ ಉತ್ತರ ದಕ್ಷಿಣಕ್ಕೆ ಕನ್ನಡದ ಇಬ್ಬರು ಮಹಾಲೇಖಕರು ಕುಳಿತಿದ್ದಾರೆ. ಪೂರ್ವಕ್ಕೆ ಮಹಾಕಲಾವಿದ ಹೆಬ್ಬಾರ ಕುಳಿತಿದ್ದಾರೆ. ಅವರ ಸಮ್ಮುಖದಲ್ಲಿ ಅದೇ ಪ್ರಾಧ್ಯಾಪಕ ವೃತ್ತಿ ಕೈಗೊಂಡಿದ್ದ ಕಿರಿಯ ವ್ಯಕ್ತಿ ನಾನಿದ್ದೆ. ಹೆಬ್ಬಾರರು ರೇಖಾ ಬ್ರಹ್ಮ. ಅವರ ರೇಖಾ ಚಿತ್ರಗಳು ಅಪ್ರತಿಮವಾಗಿವೆ. ಶಬ್ದ ಬ್ರಹ್ಮ ಬೇಂದ್ರೆಯವರ ಹಾಡುಗಳ ಬಗ್ಗೆ ಜೊತೆಗೆ ಹೆಬ್ಬಾರರ

ರೇಖಾ ಚಿತ್ರ ಇದ್ದರೆ ಎಷ್ಟು ಒಳ್ಳೆಯದಾಗುತ್ತದೆ ಎಂದು. ನಾನು ಉದ್ಗಾರ ತೆಗೆದೆ. ಎಷ್ಟೋ ವರ್ಷ ಗತಿಸಿದ ಮೇಲೆ ಮಣಿಪಾಲದಲ್ಲಿ ಬೇಂದ್ರೆಯವರ ಒಲವೆ ನಮ್ಮ ಬದುಕು ಎಂಬ ಪ್ರಣಯ ಗೀತ ಸಂಗ್ರಹ ಪ್ರಕಟವಾಯಿತು. ಒಂದು ಸಭೆಯಲ್ಲಿ ಹೆಬ್ಬಾರರು ನನ್ನನ್ನು ಕರೆದು ಮನೆಯ ಕಡೆಗೆ ಬಾ. ಒಲವೆ ನಮ್ಮ ಬದುಕು ಪುಸ್ತಕದ ಪ್ರತಿಕೊಡುವೆ. ಬೇಂದ್ರೆ ಅವರ ಪದ್ಯಕ್ಕೆ ನಾನು ರೇಖಾ ಚಿತ್ರ ಬರೆಯಬೇಕೆಂಬುದು ಮೂಲದಲ್ಲಿ ನಿನ್ನ ವಿಚಾರವಾಗಿತ್ತು! ಎಂದರು. ನನಗಾದ ಆನಂದಕ್ಕೆ ಪಾರವೇ ಇಲ್ಲ.

ಹೀಗೆ ಬೇಂದ್ರೆ ಸಾಹಿತ್ಯವನ್ನು ಕೇಂದ್ರದಲ್ಲಿಟ್ಟುಕೊಂಡು ಅನೇಕ ಹೊಸ ಹೊಸ ಸಂಗತಿಗಳನ್ನು ಲೋಕಮುಖಕ್ಕೆ ಪರಿಚಯಿಸಿ ಕೊಟ್ಟಿರುವುದು ಕುತೂಹಲಕಾರಿಯಾಗಿದೆ. ಬೇರೆಲ್ಲೂ ಸಿಗದ, ಈ ವರೆಗೆ ದಾಖಲಾಗದ ಅನೇಕ ಸಂದರ್ಭಗಳನ್ನು ಬೆಳಕಿಗೆ ತಂದು ಬೇಂದ್ರೆ ಕಾವ್ಯವನ್ನು ಹೀಗೆ ಅರ್ಥಮಾಡಿಕೊಳ್ಳಬಹುದು ಎಂಬ ಹೊಸ ಸಾಧ್ಯತೆಗಳತ್ತ ಅವರು ನಮ್ಮ ಗಮನ ಸೆಳೆದಿದ್ದಾರೆ. ಬೇಂದ್ರೆ ಅವರ ಕಾವ್ಯ; ಸ್ವಾದ - ಆಸ್ವಾದ ಈ ಕೃತಿಯ ಒಂದು ಮಹತ್ವದ ಅಧ್ಯಾಯ. ಇಲ್ಲಿ ಬೇಂದ್ರೆಯವರ ಬಹು ಚರ್ಚಿತ ಹದಿನಾಲ್ಕು ಕವನಗಳನ್ನು ಮರು ಚಿಂತನೆಗೆ ಡಾ. ಜೀವಿ ಅವರು ಒಳಗುಮಾಡಿದ್ದಾರೆ. ನಾಕು ತಂತಿ, ಇದು ಯುಗಾದಿ, ಡೂ, ನೋಟ ಹೆರಿಗೆ, ಹುಬ್ಬಳ್ಳಿಯಾಂವಾ, ಜೋಗಿ, ಗಂಗಾವತರಣ, ರುದ್ರ ವೀಣೆ ಮೊದಲಾದ ಕವಿತೆಗಳ ಅಂತರಾರ್ಥವನ್ನು ತೆರೆದು ತೋರಿ ನಮ್ಮ ವಿಮರ್ಶಕ ವರ್ಗ ಬೇಂದ್ರೆ ಕಾವ್ಯವನ್ನು ಅರ್ಥೈಸುವಲ್ಲಿ ಎಡವಿಬಿದ್ದ ಸಂದರ್ಭಗಳನ್ನು ಅವರು ಉಲ್ಲೇಖಿಸಿದ್ದಾರೆ. ಹೀಗಾಗಿ ಬೇಂದ್ರೆ ಅವರ ಬದುಕು ಬರಹದ ಬಗೆಗೆ ಹೊಸಬೆಳಕು ಇಲ್ಲಿ ಹರಿದಿದೆ. ತಮ್ಮ ಕವಿತೆಯ ಬಗೆಗೆ ಬೇಂದ್ರೆಯವರೇ ಹೇಳಿರುವ ಮಾತುಗಳನ್ನೂ ಇಲ್ಲಿ ಸೆರೆಹಿಡಿದುಕೊಟ್ಟಿರುವುದರಿಂದ ಕವಿಯ ನಿಜವಾದ ಆಶಯ ಸಹಜವಾಗಿ ಬಿಂಬಿತವಾಗಿ ಬೇಂದ್ರೆ ಅವರ ಕಾವ್ಯದ ಮೌಲ್ಯ, ಮಹಡಿ ಮತ್ತಷ್ಟು ಹೆಚ್ಚುವಂತಾಗಿದೆ. ಬೇಂದ್ರೆ ಅವರ ಕಾವ್ಯದ ವಿಭಿನ್ನ ನೆಲೆಗಳನ್ನು, ಮುಚ್ಚಿ ಹೋದ ನಾನಾ ಮುಖಗಳನ್ನು ತೆರೆದು ತೋರುವಲ್ಲಿ ಡಾ. ಜೀವಿ ಕುಲಕರ್ಣಿಯವರು ಯಶಸ್ವಿಯಾಗಿದ್ದಾರೆ. ಇದೊಂದು ಆತ್ಮೀಯವಾದ ಅಪರೂಪದ ಕೃತಿ. ಕವಿಗಳು ಕಾವ್ಯದ ಬಗೆಗೆ ಬರೆದಾಗ ಅದರಲ್ಲಿ ಒಳನೋಟಗಳಿರುತ್ತವೆ ಎಂದಿದ್ದಾನೆ. ಟಿ.ಎಸ್. ಎಲಿಯಟ್ ಮಾತು ಡಾ. ಜೀವಿ ವಿರಚಿತ ನಾ ಕಂಡ ಬೇಂದ್ರೆ ಜೀವನ ಮತ್ತು ಸಾಹಿತ್ಯ ಕೃತಿಯಲ್ಲಿ ನಿಜವಾಗಿದೆ. ಡಾ. ಜೀವಿ ಅವರ ಶ್ರಮ ಸಾರ್ಥಕವಾಗಿದೆ.

- ಡಾ. ಜಿ.ಎನ್. ಉಪಾಧ್ಯ

# ಸ್ತ್ರೀಯ ಮೇಲೆ ಆಗುತ್ತಿರುವ ಅನ್ಯಾಯ ಅತ್ಯಾಚಾರಗಳು

- ಶ್ರೀಮತಿ ಪ್ರಮಿಳಾ ಕುಲಕರ್ಣಿ

**ಈ** ತಲೆ ಬರಹನೋಡಿ ಏನಿದು ಇವರೂ ಭಾಷಣ ಮಾಡುತ್ತಾರೋ ಅಂತ ಮೂಗು ಮುರಿಯಬೇಡಿ. ಇದೇನು ಲೋಕ ಸಭೆ, ವಿಧಾನ ಸಭೆಯಲ್ಲ, ಪ್ರಚಾರ ಗಿಟ್ಟಿಸಿಕೊಳ್ಳುವ ಪ್ರಯತ್ನವೂ ಅಲ್ಲ. ಇಂದು ಸಮಾಜದಲ್ಲಿ ನಡೆಯುತ್ತಿರುವ ನಾನಾ ಪ್ರಕಾರದ ಅತ್ಯಾಚಾರಗಳಿಗೆ ಸ್ತ್ರೀ ಸಮುದಾಯ ಎಚ್ಚರಿಕೆಯಿಂದ ಇರಬೇಕಾದ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಡುವ ಪ್ರಯತ್ನ ಅಷ್ಟೆ.

ಸ್ತ್ರೀಯರ ಮೇಲೆ ಆಗುತ್ತಿರುವ ಅನ್ಯಾಯ ಅತ್ಯಾಚಾರಗಳು ರಾಮಾಯಣ ಮಹಾಭಾರತದಷ್ಟೆ ಪುರಾತನವಾದವು. ಯಾವ ಪಂಚಕನ್ಯೆಯರ ನಾಮಸ್ಮರಣೆ ಮಾತ್ರದಿಂದಲೇ ಮಹಾಪಾತಕಗಳು ನಾಶಹೊಂದುವವೆಂದು ಹೇಳುತ್ತಾರೋ ಅವರ ಕಥೆಗಳು ಇದರದ್ದೇ ಉದಾಹರಣೆಯಾಗಿದೆ. ಇತಿಹಾಸದ ಪುಟಗಳಲ್ಲಿ ಹಣಕಿ ನೋಡಿದರೆ ಇಂಥ ಅಗಣಿತ ಉದಾಹರಣೆಗಳು ನೋಡಸಿಗುತ್ತವೆ. ಯಾವುದೇ ದೇಶ ಇಲ್ಲವೇ ಸಮಾಜದ ಮೇಲೆ ಸೇಡು ತೀರಿಸಿಕೊಳ್ಳಬೇಕಾದರೆ ಅವರ ಸ್ತ್ರೀಯರ ಮೇಲೆ ಅತ್ಯಾಚಾರವನ್ನೆಸಗುವುದು ಒಂದು ಅತ್ಯಂತ ಸುಲಭ ಮಾರ್ಗವೆಂದು ಪರಿಗಣಿಸಲಾಗುತ್ತದೆ. ಮಹಾಭಾರತ ದಿಂದ ಹಿಡಿದು ಗುಜರಾತದಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಇದನ್ನೇ ತೋರಿಸಿಕೊಡುತ್ತದೆ. ಇಂದಿಗೂ ಸಮಾಜದಲ್ಲಿ ಅತ್ಯಾಚಾರದಿಂದ ಪೀಡಿತ ಮಹಿಳೆ ನೋಡಸಿಗುತ್ತಾಳೆ. ಇಂದು ಅತ್ಯಾಚಾರ ಸ್ವರೂಪ ಬದಲಾಗಿದೆ.

ದೇಶದ ಮೇಲೆ ಯುದ್ಧದ ಛಾಯೆ ಹರಡಿರುವ ಸಮಯದಲ್ಲಿ ನಾವೆಲ್ಲ ನಮ್ಮ ಸೈನಿಕರ ಗುಣಗಾನ ಮಾಡುತ್ತೇವೆ. ಯುದ್ಧದಲ್ಲಿ ಮರಣ ಹೊಂದಿದವರನ್ನು ನೆನಪು ಮಾಡಿಕೊಳ್ಳುತ್ತೇವೆ. ಆದರೆ ಅವರ ಸಾವಿನಿಂದ ವಿಧವೆಯರಾದ ಮಹಿಳೆಯರ ಬಗ್ಗೆ ನಾವು ಎಂದಾದರೂ ವಿಚಾರ ಮಾಡಿದ್ದೇವೆಯೇ? ಬರಬೇಕಾದ ಮಾಸಾಶನಕ್ಕಾಗಿ, ಇತರ ಸಂದಾಯಗಳಿಗಾಗಿ ತಮ್ಮ ಮನೆಯವರ ಹೊಟ್ಟೆಹೊರೆಯುವುದಕ್ಕಾಗಿ ಅವರಿಗೆ ಎಷ್ಟೆಲ್ಲ ಕಷ್ಟಪಡಬೇಕಾಗುತ್ತದೆ. ಎಷ್ಟೋ ಸಲ ಈ ಹಣವನ್ನು ಮಧ್ಯಸ್ಥರೇ ನುಂಗಿಹಾಕುತ್ತಾರೆ. ಇನ್ನು ಕೆಲವು ಕಡೆ ಈ ಹಣ ಮನೆಯಲ್ಲೇ ಉಳಿಯಲೆಂದು ಆ ಹೆಂಗಸಿನ ಮನಸ್ಸಿಗೆ ವಿರುದ್ಧವಾಗಿ ಅವಳ ಮೈದುನನೊಡನೆ ಅಥವಾ ಬೇರೆ ಹಿತಸಂಬಂಧಿಯೊಡನೆ ಅವಳ ವಿವಾಹ ಮಾಡಿಬಿಡುತ್ತಾರೆ. ಕುಂಭ ಮೇಳದಂತ ದೊಡ್ಡ ದೊಡ್ಡ ಸಂತೆಗಳಲ್ಲಿ ಮಕ್ಕಳಿಗೆ ಭಾರವಾಗಿರುವ ವೃದ್ಧ ತಾಯಿಯನ್ನು ತ್ಯಾಗ ಮಾಡಿಬಿಡುತ್ತಾರೆ. ಹೀಗೆ ಪರಿತ್ಯಕ್ತರಾದವರಿಗೆ ವೃದ್ಧಾಶ್ರಮ ಬಿಟ್ಟು ಬೇರೆ ದಾರಿಯಿಲ್ಲವಾಗುತ್ತದೆ. ಫೂಲನ್ ದೇವಿಯಂತ ಹಳ್ಳಿಯ ಹೆಂಗಸಿನ ಮೇಲೆ ಆಕೆ ಬಡವಳು, ಕೆಳಜಾತಿಯವಳು, ಮತ್ತು ಸ್ತ್ರೀಯಾಗಿದ್ದಾಳೆಂದು ಘೋರ ಅನ್ಯಾಯ ಮತ್ತು ಅತ್ಯಾಚಾರ ವನ್ನೆಸಗಲಾಯಿತು. ಅದರ ಬೆಲೆ ಮುಂದೆ ಸಮಾಜಕ್ಕೆ ಬೇರೆ ರೀತಿಯಲ್ಲಿ ತೆರಬೇಕಾಯ್ತು. ಕೆ.ಇ.ಎಂ. ಆಸ್ಪತ್ರೆಯಲ್ಲಿ ಕೋಮಾ ಸ್ಥಿತಿಯಲ್ಲಿ ಕೊಳೆಯುತ್ತಿರುವ ನರ್ಸ್ ಅರುಣಾ ಶಾನ್‌ಭಾಗ್ ಅಥವಾ ಲೋಕಲ್ ಟ್ರೇನ್‌ನಿಂದ ನೂಕಲ್ಪಟ್ಟು ಕಾಲು ಮುರಿದುಕೊಂಡಿರುವ ಹತಭಾಗ್ಯ ಜಯಬಾಲಾ ಆಶರ್ ೩ ಬಾರಿ ತಲಾಕ್ ಹೇಳುವುದರಿಂದ ಯಾವ ಜೀವನ ನಾಶವಾಗುತ್ತದೋ ಅಂತ ಮುಸ್ಲಿಂ ಮಹಿಳೆಯರು, ಯಾವ ಗಂಡನೊಡನೆ ಜೀವನವನ್ನು ಕಳೆಯಬೇಕೆಂದು ಸಮಾಜ ಮತ್ತು ಪಂಚಾಯತಿ ಜನ ನಿಶ್ಚಯಿಸುವ ಮುನ್ನ (ಗುಡಿಯ) ನೆನಪಿನ ಹಿಂದೆ ಸರಿದಿರುವಂತ ಕಳಾವಿದ ಮಹಿಳೆಯರು ಗಲ್ಫ್ ದೇಶಗಳಿಗೆ ಹಣಸಂಪಾದನೆ ಮಾಡಲೆಂದು ಹೋಗಿರುವ ಗಂಡಂದಿರಿಂದಾಗಿ ಶಾರೀರಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ಸಹಿಸಬೇಕಾಗಿರುವ ಕೇಳದ ಹೆಂಗಸರು ಅತ್ಯಾಚಾರ ಹಾಗೂ ಅನ್ಯಾಯದ ಎಷ್ಟೊಂದು ರೂಪಗಳು.

ಮುಂಬಯಿನಗರಿಯ ತಳಕು ಬಳಕು ಅನೇಕ ತರುಣ ತರುಣಿಯರನ್ನು ಮೂಲೆ ಮೂಲೆಯಿಂದ ಮುಂಬಯಿಗೆ ಎಳೆದು ತರುತ್ತದೆ. ಫ್ಯಾಶನ್ ಶೋ, ಬಾಲಿವುಡ್, ದೂರದರ್ಶನ ಚಿತ್ರವಾಣಿ, ಸೌಂದರ್ಯ ಸ್ಪರ್ಧೆಗಳು, ಜಾಹೀರಾತುಗಳು, ಪ್ರಸಾರ ಮಾಧ್ಯಮ ಇವೆಲ್ಲವು ಸ್ತ್ರೀಯ ಸೌಂದರ್ಯದ ತೀರ ಶಾರೀರಿಕ ಮಟ್ಟಕ್ಕೆ ತಂದು ನಿಲ್ಲಿಸಿವೆ. ಅವಳ ಕಡೆಗೆ ಒಂದು ವಸ್ತು ಇಲ್ಲವೆ ಸಾಮಗ್ರಿಯ ದೃಷ್ಟಿಯಿಂದ ನೋಡಲಾಗುತ್ತದೆ. ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಗುಣಗಳಿಂದ ಮಾನವ (ಮನುಷ್ಯ) ವ್ಯಕ್ತಿ ಮತ್ವವು ಘಟಿಸುತ್ತದೆ. ಯಾವಾಗ ಕೇವಲ ಹೊರಗಿನ ಶರೀರಕ್ಕೆ ಮಾತ್ರ ಮಹತ್ವವು ದೊರಕುತ್ತದೋ ಮತ್ತು ತಮ್ಮ ಉನ್ನತಿಯ ಏಕಮಾತ್ರ ಸಾಧನವಾಗುತ್ತದೋ ಅಲ್ಲಿ ಅನ್ಯಾಯ ಮತ್ತು ಅತ್ಯಾಚಾರದ ಜೊತೆಗೆ ಮೋಸಹೋಗುವುದು ಸ್ವಾಭಾವಿಕವಾಗುತ್ತದೆ. ಇಲ್ಲಿ ಬುದ್ಧಿಗೆ ಕೆಲಸವೇ ಇರುವುದಿಲ್ಲ. ಈ ಕ್ಷೇತ್ರಗಳಲ್ಲಿ ಸ್ಪರ್ಧೆ ಇಷ್ಟು ಭಯಂಕರವಾಗಿರುತ್ತದೆಂದರೆ ಈ ಕಲಾವಿದರು ಕೆಲವೇ ದಿನಗಳಲ್ಲಿ ಉಪಯೋಗವಿಲ್ಲದವರಾಗಿ ಬಿಡುತ್ತಾರೆ ಮತ್ತು ವಿಸ್ಮೃತಿಯ ಆಳಕ್ಕೆ ನೂಕಲ್ಪಡುತ್ತಾರೆ.

ಮುಂಬಯಿಯಲ್ಲಿ ಅತ್ಯಂತ ವೇಗವಾಗಿ ನಡೆಯುವ ಧಂದೆ ಅಂದರೆ ವೇಶ್ಯಾವೃತ್ತಿ, ದೇವದಾಸಿ ವ್ಯವಸ್ಥೆಯೂ ಇದರದ್ದೇ ಒಂದು ಅಂಗ. ಈಗ ಪ್ರವಾಸ ಮತ್ತು ಪರ್ಯಟನಕ್ಕೆ ಉತ್ತೇಜನ ಕೊಡಲು ಹೆಣ್ಣು ಮಕ್ಕಳನ್ನು ಉಪಯೋಗಿಸಲಾಗುತ್ತಿದೆ. ಬಾರ್‌ಗಳಲ್ಲಿ ರಾತ್ರೋ ರಾತ್ರಿ ಕೆಲಸ ಮಾಡಿ ಯುವತಿಯರು ಹಣ ಸಂಪಾದಿಸುತ್ತಾರೆ. ಹೆಸರು ಬೇರೆ ಬೇರೆಯಾದರೂ ಎಲ್ಲರ ಕೆಲಸವೂ ಒಂದೇ. ಅವರ ಭವಿಷ್ಯ ಅಂಧಕಾರಮಯವಾಗಿರುತ್ತದೆ. ಕ್ಷಯ ಮತ್ತು ಏಡ್ಸ್‌ನಂಥ ಶಾರೀರಿಕ ವ್ಯಾದಿಗಳು, ಮಕ್ಕಳ ಸಮಸ್ಯೆಗಳು, ಪೋಲಿಸರಿಂದ ಕಿರುಕುಳ, ಮಾಲೀಕನಿಂದ ಶೋಷಣೆ, ವೃದ್ಧಾಪ್ಯದ ಚಿಂತೆ, ಇಂಥ ಮಾನಸಿಕ ಹಾಗೂ ಶಾರೀರಿಕ ಸಮಸ್ಯೆಗಳಿಂದ ಅವರು ಸುತ್ತಲ್ಪಟ್ಟಿರುತ್ತಾರೆ. ·ಇದರ ಜೊತೆ ಜೊತೆಗೆ ಗುಂಡಾಗಿರಿ, ಗುನ್ಹೆಗಾರಿ, ವ್ಯಸನಾಧೀನತೆ ಇವು ಇದ್ದೇ ಇರುತ್ತವೆ. ಇವರ ಜೀವನ ಉಪೇಕ್ಷೆಯಿಂದ ಕೂಡಿದ ಕಷ್ಟಕರವಾದ, ವೇದನಾಭರಿತವಾದದ್ದಾಗಿರುತ್ತದೆ. ಅನೇಕ ರಾಜ್ಯಗಳಿಂದ ಇಲ್ಲಿಗೆ ಹುಡುಗಿಯರನ್ನು ತರಲಾಗುತ್ತದೆ. ಆದರೆ ನೇಪಾಳದಿಂದ ತಂದ ಹುಡುಗಿಯರ ಸಂಖ್ಯೆ ೫೦೦೦ಕ್ಕೂ ಮೀರಿದೆ. ಈಚೀಚೆಗೆ ಚಿಕ್ಕ ಚಿಕ್ಕ ಹುಡುಗಿಯರನ್ನು ಇಲ್ಲಿ ತರಲಾಗುತ್ತಿದೆ. ಬಾಲವೇಶ್ಯೆಯರ ಸಂಖ್ಯೆ ಹೆಚ್ಚುತ್ತದೆ. ಈ ವ್ಯವಸಾಯದಿಂದ ಅವರಲ್ಲಿ ಅಪಂಗತ್ವ ಉಂಟಾಗುವ ಭಯವಿದೆ. ಇದರಿಂದ ಹಣ ಮಾಡುವ ದಲ್ಲಾಳಿಗಳು, ಪೋಲಿಸರ ಜೊತೆ ಬಿಳಿಯರು ಮತ್ತು ಅರಬರೂ ಶಾಮೀಲಾಗಿದ್ದಾರೆ. ಇದರ 'ಮಾರ್ಕೆಟ್' ಇಡೀ ವಿಶ್ವದಲ್ಲಿ ಹರಡಿದೆ. ಬ್ಲೂ ಫಿಲ್ಮ್, ಇಂಟರ್‌ನೆಟ್ ಮತ್ತು ಇತರ/ಅನ್ಯ ಮಾಧ್ಯಮಗಳಿಂದ ಇದರ ಪ್ರಸಾರವಾಗುತ್ತಿದೆ. ಭೌತಿಕ ಸಮೃದ್ಧಿಯ ಜೊತೆ ಜೊತೆಯಲ್ಲಿ ತಂತ್ರಜ್ಞಾನದ ಪ್ರಗತಿಯಾಯ್ತು ಮತ್ತು ಸಮಾಜವೂ ಶೋಷಣದ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡಿತು. ಈ ಹೆಂಗಸರನ್ನು ಇಲ್ಲಿಂದ ತೆಗೆದು ಸುಧಾರಣಾ ಗೃಹಗಳಲ್ಲಿ ಇಡಲಾಗುತ್ತದೆ. ಆದರೆ ಅಲ್ಲಿ ಅವರ ಸ್ಥಿತಿ ಅತ್ಯಂತ ಭಯಾನಕವಾಗಿದ್ದು, ಈ ಪ್ರಯತ್ನವು ನಿಫಲವಾಗುತ್ತದೆ. ಯಾಕೆಂದರೆ ಸಮಾಜವು ಅವರನ್ನು ಸ್ವೀಕರಿಸುವುದಿಲ್ಲ. ಬಾಗಿಲು ಅವರಿಗಾಗಿ ಮುಚ್ಚಲಾಗಿರುತ್ತದೆ. ಅವರಿಗೆ ಮರ್ಯಾದೆ ಸಿಗುವುದಿಲ್ಲ. ಅವರಿಗಾಗಿ ಇಂದು ಬಹಳಷ್ಟು ಎನ್.ಜಿ.ಓ.ಗಳು, ಸಾಮಾಜಿಕ ಸಂಸ್ಥೆಗಳು, ಕೆಲಸಮಾಡುತ್ತಿವೆ. ಸ್ವಾಸ್ಥ್ಯದ ಬಗ್ಗೆ ತಿಳುವಳಿಕೆ ನೀಡುವುದು, ಅವರ ಮಕ್ಕಳಿಗಾಗಿ ಪೋಷಣಾಗೃಹ ನಡೆಸುವುದು ಇಂಥ ಕೆಲಸಗಳನ್ನು ಮಾಡುತ್ತಿವೆ. ಇನ್ನೊಂದು ಮುಖ ಈಚೆಗೆ ಒಮ್ಮುಖ ಪ್ರೇಮ ಪ್ರಕರಣಗಳು ಮತ್ತು ಹೆಣ್ಣು ಮಕ್ಕಳನ್ನು ಚುಡಾಯಿಸುವುದು ಅದರಿಂದ ಅವರಲ್ಲಿ ಹೆದರಿಕೆ ಮತ್ತು ಚಿಂತೆ ಮನೆಮಾಡಿರುತ್ತದೆ. ಕಾನೂನು ಇಂಥ ಘಟನೆಗಳ ವಿರುದ್ಧವಾಗಿದ್ದರು ಇವು ಘಟಿಸುತ್ತಲೆ ಇವೆ. ಇದಕ್ಕೆ ಕಾರಣ ಸಮಾಜವು ಸ್ತ್ರೀಯನ್ನು ನೋಡುವ ದೃಷ್ಟಿಕೋನ ಪುರುಷ ಒಬ್ಬ ಸರ್ವಶ್ರೇಷ್ಠ ಮತ್ತು ಹೆಣ್ಣು ಒಂದು ಉಪಭೋಗದ ವಸ್ತುವೆಂದು ಪರಿಗಣಿಸಲಾಗುತ್ತದೆ. ಪುರುಷರಿಗೆ ಇಲ್ಲವೆಂದು ಕೇಳುವ ಅಭ್ಯಾಸವಿರುವುದಿಲ್ಲ. ನ್ಯಾಯ ಧರ್ಮ ಶಿಕ್ಷಣ ಮತ್ತು ಕುಟುಂಬ ಸಂಸ್ಥೆ ಮತ್ತು ಶಾಸನಗಳು ಇದಕ್ಕೆ ಇನ್ನಷ್ಟು ಒತ್ತು ಕೊಟು ಹೆಚ್ಚಿಸುತ್ತವೆ. ಬಾಲಿವುಡನ ನಾಯಕ ಈಗ ಖಳನಾಯಕನಾಗಿದ್ದಾನೆ. ಅದು ಇನ್ನಷ್ಟು ಗ್ಲ್ಯಾಮರಸ್ ಆಗಿದೆ. ಸಿನಿಮಾ ಮತ್ತು ದೂರಚಿತ್ರವಾಣಿಯಲ್ಲಿ ಏನು ಸಂದೇಶ ಕೊಡಲಾಗುತ್ತದೊ ಅದರಿಂದ ಯುವಪೀಢಿಗೆ ವಾಸ್ತವ ಮತ್ತು ಅವಸ್ತವದಲ್ಲಿನ ಅಂತರವನ್ನು ಅರಿತುಕೊಳ್ಳಲು ಕಷ್ಟವಾಗುತ್ತದೆ. ಅವರು ಅದನ್ನೆ ಅನುಕರಣೆ ಮಾಡುತ್ತಾರೆ. ಇಂದಿನ ಶಿಕ್ಷಣ ಕೌಟುಂಬಿಕ ವಾತಾವರಣ, ನಿರುದ್ಯೋಗ ವಿಕ್ಷೋಭೆಗಳ ಜೋಪಡಪಟ್ಟಿಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ, ಮಹಿಳೆಯರು ಕೆಲಸಕ್ಕಾಗಿ ಸಂಜೆ, ರಾತ್ರಿ ಬಹಳ ಹೊತ್ತು ಮನೆಯಿಂದ ಹೊರಗುಳಿಯುವುದು ಇದೆಲ್ಲದರಿಂದ ಈ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಈಗಂತೂ ಹೆಣ್ಣು ಮಕ್ಕಳಿಗೆ ಗಂಡು ಹುಡುಗರೊಂದಿಗೆ ಕಲಿಯಬೇಕಾಗುತ್ತದೆ, ಕೆಲಸವನ್ನೂ ಮಾಡಬೇಕಾಗುತ್ತದೆ. ಇದರಿಂದ ಅವರಲ್ಲಿ ಸ್ನೇಹಾಂಕುರವಾಗುತ್ತದೆ. ಆದರೆ ಸ್ನೇಹವನ್ನು ಬೆಳೆಸುವ ಸಮಯದಲ್ಲಿ ಅವರು ಎಚ್ಚರದಿಂದಿರಬೇಕಾಗುತ್ತದೆ. ಗೆಳೆತನ ಬೆಳೆಸುವ ಹೊತ್ತಿನಲ್ಲಿ ಸುಸಂಸ್ಕಾರ ಸಭ್ಯತೆಯ ಜೊತೆಗೆ ಇತರ ವಿಷಯಗಳ ಬಗ್ಗೆ ಲಕ್ಷ್ಯ ಕೊಡಬೇಕು. ಸ್ತ್ರೀಯರ ಬಗ್ಗೆ ಆತನ ದೃಷ್ಟಿಕೋನವೇನು ಆತ ಮಾತನಾಡುವಾಗ ನಿಂದ್ಯಾತ್ಮಕವಾಗಿ ಮಾತನಾಡುತ್ತಾನೋ ಆತ ನಿಮ್ಮ ಗುಣಗಳಿಂದ ಆಕರ್ಷಿತನಾಗಿದ್ದಾನೋ ಇಲ್ಲ ಕೇವಲ ಶಾರೀರಿಕ ಆಕರ್ಷಣೆಯೋ? ನೀವು ಒಂಟಿಯಾಗಿರುವಾಗ ಮತ್ತು ಗುಂಪಿನಲ್ಲಿರುವಾಗ ನಿಮ್ಮೊಡನೆ ಆತನ ವ್ಯವಹರಿಸುವ ರೀತಿ ಬೇರೆ ಬೇರೆಯಾಗಿರುತ್ತದೆಯೋ ಈ ವಿಷಯಗಳು ನಿಮ್ಮ ಲಕ್ಷ್ಯಕ್ಕೆ ಬಂದಿದ್ದರೆ ಆತನನ್ನು ನೀವು ಕೂಡಲೇ ತಡೆಯಬೇಕು. ಆದರೆ ಸ್ವಲ್ಪ ತಯಾರಿ ಮತ್ತು ತಿಳುವಳಿಕೆಯಿಂದ ಗೆಳೆತನವನ್ನು ಕೊನೆಗೊಳಿಸುವಾಗ ಎಚ್ಚರಿಕೆಯಿಂದ ಮಾಡಬೇಕು. ಇದೇ ರೀತಿ 'ಬಾಸ್' (ಮೇಲಾಧಿಕಾರಿ) ಶಿಕ್ಷಕ ಮಾರ್ಗದರ್ಶಕ (ಗೈಡ್) ಅಥವಾ ಪ್ರಶಿಕ್ಷಕ (ಟ್ರೇನರ್) ಇವರುಗಳ ಜೊತೆಗೂ ಇರುತ್ತದೆ. ಅವರೊಡನೆ ನಮ್ಮ ಸಂಬಂಧ ಯೋಗ್ಯ ಆದರೆ ದೃಢವಾದುದಿರಬೇಕು. ಪ್ರೇಮ ಪ್ರಕರಣಗಳ ಮೂಲಕ ಆಗುವ ಕೊಲೆ, ಅತ್ಯಾಚಾರಗಳನ್ನು ತಡೆಯಬೇಕಾದರೆ ಹೆಣ್ಣು ಮಕ್ಕಳು ಜಾಗ್ರತರಾಗಿರಬೇಕಾಗುತ್ತದೆ. ತಮ್ಮ ಈ ಸಮಸ್ಯೆಗಳ ಬಗ್ಗೆ ತಮ್ಮ ಮನೆಯ ಜನರಿಗೆ ಮೊದಲೇ ತಿಳಿಸಿರಬೇಕು ಮುಚ್ಚಿಡುವುದರಿಂದ ಸಮಸ್ಯೆ ಇನ್ನೂ ಗಂಭೀರವಾಗಬಹುದು. ಹುಡುಗರಿಗೆ ಮನೆಯಲ್ಲಿ ತಕ್ಕ ಸಂಸ್ಕಾರ, ಶಿಕ್ಷಣಗಳು ದೊರಕಬೇಕು.

*"Human rights is protecting other's freedom, giving them security, letting them live. Human values are something which need to be taught and these values are to be built in us"* ***Sri. Sri. Ravishankar***

*(ಮಾನವ ಹಕ್ಕುಗಳೆಂದರೆ ಇತರರ ಸ್ವಾತಂತ್ರ್ಯವನ್ನು ಕಾಪಾಡುವುದು. ಅವರಿಗೆ ರಕ್ಷಣೆಯನ್ನು ಕೊಟ್ಟು, ಜೀವಿಸಲು ಬಿಡುವುದು. ಮಾನವ ಗುಣಗಳನ್ನು ಕಲಿಸಬೇಕಾಗುತ್ತದೆ ಮತ್ತು ಈ ಗುಣಗಳನ್ನು ನಮ್ಮೊಳಗೆ ಬೆಳೆಸಬೇಕು. - ಶ್ರೀ ಶ್ರೀ ರವಿಶಂಕರ್)*

# The Mysore Association, Bombay

**Fourth Coming Programmes**

On Wednesday 11th may 2005 At Ground Floor Lounge

**Akshaya Trithiya Pooja**

| | |
|---|---|
| 5.00 p.m. | Ganapathi Homa |
| 6.00 p.m. | Navagraha Pooja |
| 7.00 p.m. | Ganapathi Sahasranaama |
| 8.00 p.m. | Mahamangalarthi & Prasad Viniyoga |

**On Thursday 26th May 2005** At Ground Floor Lounge

| | |
|---|---|
| 7.00 p.m. | Sankashti Pooja |

# ಕರ್ನಾಟಕ - ಮಹಾರಾಷ್ಟ್ರ ಸಾಂಸ್ಕೃತಿಕ ಬಾಂಧವ್ಯ

- ಡಾ. ಜಿ.ಎನ್. ಉಪಾಧ್ಯ

ಕರ್ನಾಟಕ ಮತ್ತು ಮಹಾರಾಷ್ಟ್ರ ಇವು ನೆರೆಯ ರಾಜ್ಯಗಳು. ಇವುಗಳ ನಡುವಿನ ಸಂಬಂಧ ಕರಳು ಬಳ್ಳಿಯ ಸಂಬಂಧ. ಈ ಉಭಯ ರಾಜ್ಯಗಳ ನಡುವಿನ ಆದಾನ ಪ್ರಧಾನವನ್ನು ಅನುಲಕ್ಷಿಸಿ ಡಾ. ಜಿ. ಎನ್ ಉಪಾಧ್ಯ ಅವರು ಸುಧೀರ್ಘವಾದ ಲೇಖನವನ್ನು ಬರೆದುಕೊಟ್ಟಿದ್ದಾರೆ. ನಮ್ಮ ನೇಸರು ಪತ್ರಿಕೆಯಲ್ಲಿ ಇದನ್ನು ಎಂಟು - ಹತ್ತು ಭಾಗಗಳಲ್ಲಿ ಪ್ರಕಟಿಸಲಾಗುವುದು.

- ಸಂ

ಕರ್ನಾಟಕ ಹಾಗೂ ಮಹಾರಾಷ್ಟ್ರ ಇವೆರಡು ನೆರೆಯ ರಾಜ್ಯಗಳು. ಕನ್ನಡ ಮತ್ತು ಮರಾಠಿ ಭಾಷೆಗಳ ಬಾಂಧವ್ಯ ಅನಾದಿ ಲಾಗಾಯ್ತಿನಿಂದಲೂ ಈ ಉಭಯ ರಾಜ್ಯಗಳ ನಡುವೆ ಸಾಂಸ್ಕೃತಿಕ ಕೊಳುಪಡೆ ಅವ್ಯಾಹತವಾಗಿ ನಡೆದಿದೆ. ಹಾಗೆಯೇ ಈ ಎರಡು ಭಾಷಾ ಪ್ರದೇಶಗಳು ಅಂಟಿಕೊಂಡು ಜೊತೆಯಾಗಿವೆ. ಕನ್ನಡ - ಮರಾಠಿ ಭಾಷೆಗಳ, ಸಂಸ್ಕೃತಿಗಳ ನಡುವಣ ನಂಟಿಗೆ ಶತಮಾನಗಳ ಇತಿಹಾಸವಿದೆ. ಗೋದಾವರಿ ನದಿಯನ್ನು ದಾಟಿ ನರ್ಮದಾ ನದಿಯವರೆಗೆ ಆಡಳಿತ ನಡೆಸಿದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ದೇವಗಿರಿಯ ಸೇವೂಣರು ಹಾಗೂ ಅವರ ಮಾಂಡಲಿಕರು ಕನ್ನಡ ನಾಡಿನ ಹಿರಿಮೆಗರಿಮೆಗಳನ್ನು ಕಾಪಾಡಿದ್ದರೆಂಬುದು ಅಭಿಮಾನದ ಸಂಗತಿ. ಕರ್ನಾಟಕ, ಕನ್ನಡಿಗ, ಕನ್ನಡ ಈ ಮೂರೂ ಘಟಕಗಳಿಗೂ ಈ ಆಳರಸರು ಘನತೆ ಗೌರವಗಳನ್ನು ಗಳಿಸಿಕೊಟ್ಟರು. ಕನ್ನಡ ಸಾಹಿತ್ಯ ಕಲೆ ಮತ್ತು ಸಂಸ್ಕೃತಿಯನ್ನು ಶಕ್ತಿ ಮೀರಿ ಪ್ರೋತ್ಸಾಹಿಸಿದರು. ಶಿಲಾಹಾರರು, ದೇವಗಿರಿಯ ಸೇವೂಣರು ಮತ್ತು ಕಲಚುರಿಗಳ ಇತಿಹಾಸವೆಂದರೆ ಕರ್ನಾಟಕ ಮಹಾರಾಷ್ಟ್ರದ ಜನರ ಸಮ್ಮಿಶ್ರವಾದ ಇತಿಹಾಸವೇ ಆಗಿದೆ. ಇವರು ಸ್ನೇಹಿತರಾಗಿ ಬಾಳಿದುದು; ಸ್ಪರ್ಧಿಗಳಾಗಿ ಹೋರಾಡಿದುದೂ ಐತಿಹಾಸಿಕ ಸತ್ಯ.

ಕನ್ನಡ ನಾಡಿಗೆ, ಮಹಾರಾಷ್ಟ್ರದ ರಾಜಕೀಯ ಸಾಹಿತ್ಯ ಚರಿತ್ರೆಗಳಿಗಿಂತ ಹೆಚ್ಚಿನ ಹಳಮೆಯಿದೆ. ಸರ್ವ ಭಾಷಾಮಯಿಯಾದ ಸರಸ್ವತಿಯ ಉಪಾಸಕರಾದ ಅಂದಿನ ಕನ್ನಡ ಅರಸರ ಆಶ್ರಯದಲ್ಲಿ (ದೇವಗಿರಿಯ ಸೇವೂಣರ ಕಾಲದಲ್ಲಿ) ಮರಾಠಿ ಭಾಷೆಗೆ ವಿಶೇಷ ಮನ್ನಣೆ ಪ್ರಾಪ್ತವಾಯಿತು. ಕನ್ನಡ ಕವಿತಾ ಸಂಪ್ರದಾಯವನ್ನು ಮೆಚ್ಚಿ ಅನುಸರಿಸಿ ಕಾವ್ಯ ಕೃಷಿಯನ್ನು ಮಾಡಿದ ಮರಾಠಿ ಕವಿಗಳೂ ಇದ್ದಾರೆ. ಹೀಗೆ ಹನ್ನೊಂದು ಹನ್ನೆರಡನೆಯ ಶತಮಾನದಲ್ಲೇ ಕನ್ನಡದ ಜೊತೆಗೆ ಮರಾಠಿ ಭಾಷೆ ಹಾಗೂ ಸಾಹಿತ್ಯವನ್ನು ಪೋಷಿಸಿದ ಕನ್ನಡ ದೊರೆಗಳು, ನಮ್ಮಲ್ಲಿರಬೇಕಾದ ಸಾರಸ್ವತ ಮೈತ್ರಿಗೆ ನಾಂದಿ ಹಾಡಿದ್ದಾರೆಂಬುದು ಗಮನಾರ್ಹ ಸಂಗತಿ. ರಾಜಕೀಯ ಕಾರಣಗಳಿಗಾಗಿ ಆಗಾಗ ಕರ್ನಾಟಕ - ಮಹಾರಾಷ್ಟ್ರದ ಗಡಿ ಸಮಸ್ಯೆಯ ಗಲಾಟೆ ತಾರಕಕ್ಕೇರಿದರೂ ಸಾಹಿತ್ಯಿಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ ಇವೆರಡು ರಾಜ್ಯಗಳ ನಡುವಿನ ಸಂಬಂಧ ಹೊಕ್ಕಳು ಬಳ್ಳಿಯ ಸಂಬಂಧವೇ ಆಗಿದೆ. ವಿವಿಧ ಅರಸು ಮನೆತನಗಳ ಆಳ್ವಿಕೆ, ಜೈನಧರ್ಮ, ವೀರಶೈವ ಧರ್ಮ ಮೊದಲಾದ ಧರ್ಮಗಳ ಪ್ರಭಾವ, ಜ್ಞಾನೇಶ್ವರ, ತುಕಾರಾಮ, ಪುರಂದರದಾಸ, ಕನಕದಾಸ, ಮಹಿಪತಿದಾಸ ಮುಂತಾದ ಸಂತಶ್ರೇಷ್ಠರ ಪ್ರೇರಕ ಸಂಬಂಧಗಳಿಂದಾಗಿ ಇವೆರಡು ರಾಜ್ಯಗಳ ನಡುವಿನ ಅನ್ಯೋನ್ಯತೆ ಹೆಚ್ಚಿದೆ.

ಮಹಾರಾಷ್ಟ್ರದ ಹಲವಾರು ದೇವತೆಗಳು ಮೂಲದಲ್ಲಿ ಕನ್ನಡಿಗರ ದೇವತೆಗಳೆಂಬುದರಲ್ಲಿ ಎರಡು ಮಾತಿಲ್ಲ. ಪಂಢಪುರದ ವಿಠೋಬ ಕನ್ನಡಿಗರ ದೇವರೆಂಬ ವಿಷಯವನ್ನು ಮರಾಠಿ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಕೊಲ್ಹಾಪುರದ ಮಹಾಲಕ್ಷ್ಮಿಯೂ ಕನ್ನಡಿಗರ ದೇವತೆಯೇ. ಇದೇ ದೇವತಾ ಪರಂಪರೆಗೆ ಮೈಲಾರದೇವನೂ ಸೇರಿಕೊಳ್ಳುತ್ತಾನೆ. ಉತ್ತರ ಕರ್ನಾಟಕದ ಆರಾಧ್ಯ ದೈವ ಮೈಲಾರ ಲಿಂಗಕ್ಕೆ ಮರಾಠಿಗರು ಖಂಡೋಬಾ ಎಂದು ಕರೆದು ಪೂಜಿಸಿ ತಮ್ಮವನನ್ನಾಗಿ ಮಾಡಿಕೊಂಡರು. ನೆಲ - ಜಲ - ಭಾಷೆ ಈ ಮೂರೂ ಅಂಶಗಳು ಕನ್ನಡ - ಮರಾಠಿ ಬಂಧುತ್ವವನ್ನು ಬೆಸೆದಿವೆ. ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ ಅನೇಕ ಸ್ಥಿತ್ಯಂತರ - ವೈರ - ವೈಷಮ್ಯಗಳು ತಲೆದೋರಿದರೂ ಕರ್ನಾಟಕ ಮಹಾರಾಷ್ಟ್ರದ ಜನರ ನಡುವೆ ಅನ್ಯೋನ್ಯತೆ ಗಾಢವಾಗಿಯೇ ಇದೆ.

### ಅಧ್ಯಯನ ಉದ್ದೇಶ

ಕರ್ನಾಟಕ ಮಹಾರಾಷ್ಟ್ರ ಸಾಂಸ್ಕೃತಿಕ ಸಂಬಂಧದ ಬಗೆಗಿನ ಅಧ್ಯಯನ ಅಗತ್ಯವಾದರೂ ಏನು? ಎಂಬ ಪ್ರಶ್ನೆಗೆ ''ಈ ಎರಡೂ ರಾಜ್ಯಗಳ ಸಾಂಸ್ಕೃತಿಕ ಇತಿಹಾಸದಲ್ಲಿ ಗೈರು ಹಾಜರಾದ ಅಂಶಗಳನ್ನು ಬೆಳಕಿಗೆ ತರುವುದು, ರಾಜಕೀಯದ ನೆಪದಲ್ಲಿ ಈ ಸಹೋದರ ಭಾಷಿಕರ ಮಧ್ಯೆ ವಿಷಬೀಜಗಳನ್ನು ಬಿತ್ತುವ ಕುತಂತ್ರಕ್ಕೆ ತಡೆಯೊಡ್ಡುವುದು, ನಾವೆಲ್ಲ ಒಂದು ದೇಶದ ಪ್ರಜೆಗಳು, ಒಬ್ಬರಿಗೊಬ್ಬರು ಋಣಿಗಳಾಗಿ ಬದುಕಿದ್ದೇವೆ. ಈ ಸಾಮರಸ್ಯವನ್ನು ಮುಂದೆಯೂ ಸಾಗಿಸಿಕೊಂಡು ನಡೆಯುತ್ತೇವೆ. ಯಾರೋ ಹೇಳಿದ ಮಾತಿಗೆ ಭಾವುಕರಾಗದೇ ತಲತಲಾಂತರದಿಂದ ಬಂದ ಈ ಪರಂಪರೆಯನ್ನು ಪಾಲಿಸುವುದು'' ಎಂದೆಲ್ಲ ಹೇಳಬಹುದಾಗಿದೆ.

ಗಡಿ ತಂಟೆ, ನದಿ ನೀರಿನ ಹಂಚಿಕೆಯಂಥ ಸಣ್ಣ ಪುಟ್ಟ ವಿಷಯಗಳೂ ಇಂದು ರಾಜಕಾರಣಿಗಳ ಕರಾಮತ್ತಿನಲ್ಲಿ ಬಿಡಿಸಲಾಗದ ಕಗ್ಗಂಟಾಗಿರುವುದು ಎಲ್ಲರಿಗೂ ತಿಳಿದ ಸಂಗತಿ. ಭಿನ್ನ ಭಾಷೆಯ ಭಿನ್ನ ಸಂಸ್ಕೃತಿಯ ಜನ ಒಂದು ಗೂಡಿ ಬಾಳುವುದಕ್ಕೂ ಇವತ್ತಿನ ರಾಜಕಾರಣ ಬಿಡುತ್ತಿಲ್ಲ ಎಂಬುದು ದುರಂತದ ವಿಷಾದದ ಸಂಗತಿ. ಹಗರಣಗಳನ್ನು ಹುಟ್ಟಿಸುವುದೇ ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿಕೊಂಡ ರಾಜಕೀಯ ವ್ಯವಸ್ಥೆಯ ಹುನ್ನಾರಕ್ಕೆ ಸಾಮಾನ್ಯರು ಬಲಿಯಾಗಬಾರದು. ಭಾಷೆ ಒಂದು ಸಂಪರ್ಕ ಮಾಧ್ಯಮ. ನಮ್ಮ ಹಿಂದಿನವರು ಇದನ್ನು ಚೆನ್ನಾಗಿ ಅರಿತು ಆಚರಣೆ ತಂದರು. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕರ್ನಾಟಕ - ಮಹಾರಾಷ್ಟ್ರ ರಾಜ್ಯಗಳ ನಡುವೆ ನಡೆದ ಸಾಂಸ್ಕೃತಿಕ ಆದಾನ ಪ್ರಧಾನವನ್ನು ಮುನ್ನೆಲೆಗೆ ತಂದು ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಕೃತಿಯಲ್ಲಿ ಮಾಡಲಾಗಿದೆ.

ಕರ್ನಾಟಕ ಮಹಾರಾಷ್ಟ್ರ ಈ ಎರಡೂ ರಾಜ್ಯಗಳ ಇತಿಹಾಸವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಇವುಗಳ ನಡುವಿನ ಸಂಬಂಧ ಕರಳುಬಳ್ಳಿಯ ಸಂಬಂಧವೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಖಚಿತವಾಗಿ ಅಧ್ಯಯನ ಮಾಡಿಯೇ ಈ ಎರಡು ಸಂಸ್ಕೃತಿಗಳು ಅವಳಿ - ಮಕ್ಕಳಿದ್ದಂತೆ ಎಂಬ ನಿರ್ಧಾರಕ್ಕೆ ವಿದ್ವಾಂಸರು ಬಂದಿರುವುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಕರ್ನಾಟಕ - ಮಹಾರಾಷ್ಟ್ರಗಳ ನಡುವಿನ ಇಂದಿನ ಜಗಳಾಟದ ಮನೋವೃತ್ತಿ ಪ್ರಾಚೀನ ಕರ್ನಾಟಕ ಮಹಾರಾಷ್ಟ್ರಗಳ ಸಂಬಂಧವನ್ನು ತಿಳಿದುಕೊಳ್ಳಲು ಅಡ್ಡಿಯಾಗುತ್ತದೆ. ಇಂದಿನ ಪ್ರಾಂತಾಭಿಮಾನದ ಕನ್ನಡಕವನ್ನು ದೂರಸರಿಸದೇ ಆ ಕಾಲದ ವಸ್ತುಸ್ಥಿತಿಯನ್ನು ಸರಿಯಾಗಿ ಅರಿಯುವುದು ಸಾಧ್ಯವಿಲ್ಲ.

''ಕನ್ನಡ ಮತ್ತು ಮರಾಠಿ ಭಾಷೆಗಳ ಮತ್ತು ಸಾಹಿತ್ಯದ ತಟಸ್ಥವಾದ ಅಭ್ಯಾಸ ಮಾಡದಿದ್ದರೆ ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿಯ ಅನೇಕ ಸಮಸ್ಯೆಗಳು ಪರಿಹಾರವನ್ನು ಕಾಣಲಾರವು'' (ಮರ್ಹಾಟಿ ಸಂಸ್ಕೃತಿ 1970 ಪುಟ 115) ಎಂಬ ಸಂಶೋಧಕ ಶಂಬಾ ಜೋಶಿ ಅವರ ಮಾತನ್ನು ನಾವು ಇನ್ನಾದರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ಉಭಯ ರಾಜ್ಯಗಳ ಕೊಳುಪಡೆಯನ್ನು ಅಧ್ಯಯನ ಮಾಡುವವನು ತೂಕತಪ್ಪದಂತೆ ನಡೆಯಬೇಕಾಗುತ್ತದೆ. ಇಲ್ಲಿ ಯಾವ ಭಾಷೆ - ಸಾಹಿತ್ಯ, ಸಂಸ್ಕೃತಿಯೂ ಮೇಲುಕೀಳಾಟಕ್ಕೊಳಿಯಬಾರದು. ಆ ಭಾಷೆ ಶ್ರೇಷ್ಠ ಈ ಭಾಷೆ ಕನಿಷ್ಠ ಎಂಬ ಭೇದಭಾವವನ್ನು ಬದಿಗಿಟ್ಟು ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸುವ ಪ್ರಯತ್ನವಾಗಬೇಕು.

ಕರ್ನಾಟಕ : ಭೌಗೋಳಿಕ ವ್ಯಾಪ್ತಿ ಪ್ರಾಚೀನತೆ

ಭಾರತದ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಕರ್ನಾಟಕ ಬಹಳ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ರಾಮಾಯಣ ಮಹಾಭಾರತಗಳ ಕಥಾ ಸಂಗತಿಗಳೊಂದಿಗೆ ಕರ್ನಾಟಕದ ಸಂಬಂಧ ಬೆಸೆದುಕೊಂಡಿದೆ. ಕರ್ನಾಟಕ ಭಾರತದ ದಕ್ಷಿಣ ಭಾಗದಲ್ಲಿ ಸ್ವಲ್ಪ ಪಶ್ಚಿಮ ದಿಕ್ಕಿನಲ್ಲಿದೆ. ಅದು ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಿದೆ. ಅಲ್ಲದೆ ದಖನ್ ಪ್ರಸ್ಥ ಭೂಮಿಯ ನೈರುತ್ಯ ಭಾಗದಲ್ಲಿ ಉತ್ತರ ಅಕ್ಷಾಂಶ 11°30'ದಿಂದ 18°45'ದ ವರೆಗೂ ಹಬ್ಬಿದೆ. ವಾಯುವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ಮಹಾರಾಷ್ಟ್ರವೂ ಪೂರ್ವದಲ್ಲಿ ಆಂಧ್ರಪ್ರದೇಶವೂ ಆಗ್ನೇಯದಲ್ಲಿ ಹಾಗೂ ದಕ್ಷಿಣದಲ್ಲಿ ತಮಿಳುನಾಡೂ ನೈರುತ್ಯದಿಕ್ಕಿನಲ್ಲಿ ಕೇರಳ ರಾಜ್ಯವಿದ್ದು ಪಶ್ಚಿಮದಲ್ಲಿ ಅರಬ್ಬೀ ಸಮುದ್ರವೂ ಕರ್ನಾಟಕ ರಾಜ್ಯದ ಮೇರೆಗಳಾಗಿವೆ. ಭಾಷಾ ಪ್ರದೇಶವನ್ನು ಗಮನಿಸಿ ಸಂಶೋಧಕ ಡಾ. ವೆಂಕಟಾಚಲ ಶಾಸ್ತ್ರಿ ಅವರು 'ಪಶ್ಚಿಮದ ಕಡೆ ಅರಬ್ಬಿಸಮುದ್ರದ ಪ್ರಾಂತಕ್ಕೆ ಸೇರಿದ ಕೊಲ್ಹಾಪುರ, ದಕ್ಷಿಣ ಸತಾರ, ಸೊಲ್ಲಾಪುರ, ಉಸ್ಮಾನಾಬಾದ್, ನಾಂದೇಡ್ ಈ ಪ್ರದೇಶಗಳ, ಪೂರ್ವದ ಕಡೆ ಆಂಧ್ರಪ್ರದೇಶದ ನಿಜಾಮಾಬಾದ್, ಮೇಡಕ್, ಮೆಹಬೂಬ್ ನಗರ್, ಕರ್ನೂಲ್, ಅನಂತಪುರ, ಚಿತ್ತೂರ್ ಈ ಪ್ರದೇಶಗಳ, ಆಗ್ನೇಯ ದಕ್ಷಿಣಗಳಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್, ಸೇಲಂ ಕೊಯಮತ್ತೂರ್ ನೀಲಗಿರಿ ಈ ಪ್ರದೇಶಗಳ, ನೈರುತ್ಯದಲ್ಲಿ ಕೇರಳದ ಎಲ್ಲೆ ಕಟ್ಟುಗಳೊಳಗಿನ ಕನ್ನಡ ಭಾಷಾ ಪ್ರದೇಶವೇ ಇಂದಿನ ಕರ್ನಾಟಕವೆನ್ನಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. (ನಮ್ಮ ಕರ್ನಾಟಕ, ಕಸಾಪ, ಬೆಂಗಳೂರು. 1983. ಪುಟ 3) ಕರ್ನಾಟಕ ಒಟ್ಟು ವಿಸ್ತೀರ್ಣ 191.791 ಚದರ ಕಿಲೋಮೀಟರ್.

ಕರ್ನಾಟ, ಕರ್ಣಾಟಕ, ಕನ್ನಡ ಎಂಬ ಹೆಸರುಗಳು ಬಹಳ ಪ್ರಾಚೀನ ಕಾಲದಿಂದಲೂ ಈ ನಾಡಿಗೆ ಇದ್ದ ಅಂಶ. ಶಾಸನಗಳಿಂದ ಹಾಗೂ ಸಾಹಿತ್ಯ ಕೃತಿಗಳಿಂದ ತಿಳಿದು ಬರುತ್ತದೆ. ಕನ್ನಡ ಎಂಬ ಶಬ್ದ ದೇಶ ಸೂಚಕವಾಗಿ, ಭಾಷಾವಾಚಕವಾಗಿಯೂ ಬಳಕೆಯಾಗಿದೆ. ಕನ್ನಡದ ಮೊದಲ ಉಪಲಬ್ಧ ಕೃತಿ (ಕಾಲ ಸುಮಾರು ಕ್ರಿ.ಶ. 850) ಕವಿರಾಜ ಮಾರ್ಗದಲ್ಲಿ ಕನ್ನಡ ಎಂಬುದು ಮೊದಲ ಬಾರಿಗೆ ದೇಶ ಹಾಗೂ ಭಾಷಾವಾಚಕವಾಗಿ ದಾಖಲಾಗಿರುವುದನ್ನು ಕಾಣಬಹುದು. ಆ ಪದ್ಯ ಇಂತಿದೆ.

''ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ''

(ಕವಿರಾಜ ಮಾರ್ಗ - 1.36)

ಕಾವೇರಿ ನದಿಯಿಂದ ಗೋದಾವರಿ ವರೆಗೆ ಇರುವ ಆ ಕನ್ನಡ ನಾಡು ಪ್ರಸಿದ್ಧವಾದ ಜನಪದವೆನಿಸಿದೆ ಎಂಬ ಮಾತು ಐತಿಹಾಸಿಕವಾಗಿ ನಿಜವೇ ಆಗಿದೆ.

1) ಮಹಾ ಭಾರತದ ಸಭಾ ಪರ್ವ ಹಾಗೂ ಭೀಷ್ಮ ಪರ್ವದಲ್ಲಿ 'ಕರ್ಣಾಟಕ' ಎಂಬ ಶಬ್ದ ಬಳಕೆಯಾಗಿದೆ.

2) ಸ್ಕಾಂದ ಪುರಾಣ, ಭಾಗವತ ಪುರಾಣ, ಮಾರ್ಕಂಡೇಯ ವಿಷ್ಣು ಪುರಾಣ, ಪದ್ಮ ಪುರಾಣಗಳಲ್ಲಿ ಕರ್ನಾಟಕದ ಪ್ರಸ್ತಾಪ ಬಂದಿದೆ.

3) ಶೂದ್ರ ಕವಿಯ ಮೃಚ್ಛಕಟಿಕ (ಕಾಲ ಕ್ರಿ.ಶ. ಸು. 400)ದಲ್ಲಿ 'ಕರ್ಣಾಟ ಕಲಹ ಪ್ರಯೋಗಂ ಕರೋಮಿ' ಎಂಬ ಉಲ್ಲೇಖವಿದೆ.

4) ಪ್ರಾಕೃತ ಭಾಷೆಯಲ್ಲಿ ರಚನೆಯಾದ ಉದ್ಯೋತನ ಸೂರಿಯ ಕುವಲಯ ಮಾಲಾ (ಕಹಾ ಕಾಲ ಕ್ರಿ.ಶ.ಸು.779) ಕೃತಿಯಲ್ಲಿ

ಲಾಡಾ ಕಣ್ಣಾಡಾವಿಯ ಮಾಲಲಿಯ ಕಣ್ಣುಜ್ಜ ಗೊಲ್ಲಯಾ,

- ಕೇ ಇ

5) ಮರಹಟ್ಟಯ ಸೋರಟ್ಟಾ ಢಕ್ಕಾ ಸಿರಿ ಅಂಡ ಸೇಂದವಯೊ ಎಂದಿದೆ.

6) ತಮಿಳು ಭಾಷೆಯ ಕವಿ ಇಳಂ ಗೋವಡಿಗಳ್ ವಿರಚಿತ ಶಿಲಪ್ಪದಿಗಾರಂ ಕಹಾ (ಕಾಲ ಸು. 600) ಕರುನಾಡರ್ ಎಂದು ದಾಖಲಾಗಿದೆ.

ಹೀಗೆ ಕನ್ನಡ - ಕರ್ನಾಟಕ ಎಂಬ ಶಬ್ದಗಳು ಕನ್ನಡವಲ್ಲದೆ ವಿವಿಧ ಭಾರತೀಯ ಭಾಷೆಗಳ ಕೃತಿಗಳಲ್ಲಿ ಶಾಸನಗಳಲ್ಲಿ ಪ್ರಯೋಗಗೊಂಡದ್ದನ್ನು ನೋಡಬಹುದು.

ಕರ್ನಾಟಕದ ನಕಾಶೆ



## ಶ್ರೀ ಶಂಕರ ಭಗವತ್ಪಾದರು

(ಪುಟ 3ರಿಂದ...)

ಅಖಂಡವಾದ ವಿಶಾಲ ತತ್ವದ ಆಧಾರದ ಮೇಲೆ ಸಮನ್ವಯ ಮನೋಧರ್ಮವನ್ನು ವಿಮರ್ಶಿಸಿದಾಗ ''ಆಧುನಿಕತೆ ಕಾಲಮಾನಕ್ಕೆ ಸೇರಿದುದಲ್ಲ. ಮನೋಧರ್ಮಕ್ಕೆ ಸೇರಿದುದು'' ಎಂಬ ವಿಷಯ ಶ್ರೀ ಶಂಕರಾಚಾರ್ಯರ ವಿಚಾರದಲ್ಲಿ ನಿಜವೆನಿಸುತ್ತದೆ.

ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳು

ಶಂಕರರ ಅದ್ಭುತವಾದ ಪ್ರತಿಭೆ,ಅಧ್ಯಾತ್ಮಿಕ ಸಂಪತ್ತು, ಭೂತ, ದಯೆ ಮುಂತಾದ ಅಸಾಧಾರಣ ಗುಣಗಳನ್ನು ಮೆಚ್ಚಿದ ಅನೇಕ ಪಾಶ್ಚಾತ್ಯ ವಿದ್ವಾಂಸರು ಅವರನ್ನು ಮುಕ್ತ ಕಂಠದಿಂದ ಹೊಗಳಿ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ.

*Western people can hardly imagine a personality like that of Shankara Charya. We contemplate with wonder and delight the devotion of francies of Assissi, the intellect of Abelind, the vinile force and Freedom of martin Luther, but who could imagine that all these united in one person.*

***- Sister Nivedita***

*It may be admitted that if the Impossible task of rcconciling the contradiction of upanishads & reducing them to harmonious and consistent whole is to be attempted at all, Shankara's system is about the only one that can do it.*

***- Colonel jacob***

(ಸಂಗ್ರಹಣೆ : ವಿವಿಧ ಆಧಾರಗಳಿಂದ)


## MATRIMONIAL

Wanted Good looking Homely, Fairly Educated girl for a boy 32 yrs, From Doctors family. She should have family values and adoptable. Horoscope not much needed. Girl would be given good care.
Contact : Dr. V.L. Kikeri
Ph. : 25100151

***

Wanted suitable Brahmin boy from respected family with decent job, for Brahmin girl (Kannada Speaking) working as teacher 9B.A.) 25 years, Vishwamitra Gorta, Swati Naksjatra, 5 feet tall
Please contact : Mrs. Rao
Ph. : 2635 5881

# A PRAYER

अगजाननपद्मार्कं गजाननमहनिशम्।
अनेकदं तं भक्तानामेकदन्तमुपास्महे।।

Agajaanana Padmaarkam Gajaanannam aharnisam
Anekadam Tam Bhaktannam Ekadantam Upaasmahe

*We pray day and night to the one with a single tusk the one who is like the sun to the lotus face of the daughter of the mountains (Parvati), the one with an elephant face and the one who gives innumerable things to his devotees*

नमस्ते शारदे देवि काश्मीरपुवासिनि।
त्वामहं प्रार्थये नित्यं विद्यादानं चदेहि मे।।

Namaste saarade Devi kashmeerapura Vaasini
Tvaa maham praarthaye nityam Vidyaadaanam cha dehime

*Salutatations to oh Saarada devi, the one who lives in the city of Kaasmeera, I pray to you always, do give me the gift of knowledge.*

अज्ञानतिमिरान्धस्य ज्ञानाञ्जनशूलाकया।
चक्षुरुन्मीलितं येन तस्मै श्रीगुरवे नमः।।

Ajnaana Timirandhasya, Ijyanaaniana Salaakaya
Chakshurunmmeitam yena', tasmai Sreeguravenamah

*Salutations to that teacher who has with the colerium stick of knowledge opened Colerium stick of knowledge opened the eyes of the one blinded by the cataract of ignorance.*

वागर्थाविव संपृक्तौ वागर्थप्रतिपत्तये।
जगतः पितरौ वन्दे पार्वतीपरमेश्वरौ।।

Vaagar thaaviva Sampruktan
Vaagar tha prati pattaye
Jagatah pitararu Vande
Paarvati Parameswarau

*I Solute Parvati and Parmeswara alternately Paarvatipa – the Lord of Parvati and Rameshwarau – the Lord of Mahalakshmi), who are attached to cache other like word and its meaning, and who are the universal parents for the purpose of access to words and their meanings*

## सुभाषितानि
## (WORDS OF WISDOM)

अपूर्वः कोडपि कोशोऽयं विद्यते तव भारति।
व्यवतो वृद्धिमायाति क्षयमायाति च सञ्चयात्।।

Apoorvah Kopi Kosoyam Vidyate tava Bhaarati
Vyayato Vruddhimaayaati, Kshayamaayati cha Sanchayaat

*Oh Bharati (goddess Saraswati) Your treasure indeed in unique as it increases, (appreciates) on spending and depreciates on being Boarded. It is indeed true. Knowledge indeed is some thing that the more you give it to others, the more it increases, the more your keep it to your self, the more it depreciated. So it is good to share our knowledge more and with others.*

द्राक्षा म्लानमुखी जाता शर्करा चाश्मतां गता।
सुभाषित रसं दृष्ट्वा सुधा भीता दिवं गता।।

Draaksha Mlaanamukmi Jaata, Sarkara chaasamataam Gotra
Subhaashita rasm Drsshtva Sudhaa Bheeta Divam Gataa

*Here the poet says that compared to the sweetness of the Subhaashitaas (the words of wisdom in Sanskrit) the universally accepted sweet things are nowhere.*
*He says perhaps on seeing the Subhashitas that the graper (raisins) have become dry, the gur has become story and nectar through fear has gone away to heavens.*

खिन्नं चापि सुभाषितेने रमते स्वीयं मनः सर्वदा
श्रुत्वान्यस्य सुभाषितं खलु मनः श्रोतुं पुनर्वाञ्छति।
अज्ञाज्ञानवतोऽप्यनेन हि वशीकर्तुं समर्थो भवेत्
कर्तव्यो हि सुभाषितस्य मनुजैरावश्यकः सङ्ग्रहः।।

Khinnam Chaapi Subhaashetena Ramate Smeeyam Manah Sarvadaa
Srutvaanyasya Subaashetam Khalu Manah Srotum Puravaanchati
Ajnyanjnyanavato phyanera hi Vaseekartum Samartho Bhavet
Kartavya hi Subhaashitasya Marujai raavasyakhah Songrahah

*The Subhashitass bring pleasure to even one's dejected mind. On heaving other's Subhaashrtas, one craves to listen to more Through Subhaashitaas one can attract (Subjnate) both the ignorant and the knowledgeable. People should really make it a point to make a collection of Subhaashtaas*

न चोरहार्यं न च राजहार्यं न भ्रातृभाज्यं न च भारकाटि
व्यये कृते वर्धत एव नित्यं विद्याधनं सर्वधन प्रधानम्।।

Na Chora haaryam, na cha Raajahaaryam
Na Bhratrubhaajyam, na cha bhaarakaati
Vyaye krute Vardhata eva nityam
Vidya dhanam Sarvadhana pradhaanam

*The wealth of knowledge is indeed the most important of all forms of health. This is so as it can not be snatched away by the rules, it can not be partitioned among brothers (siblings), nor is it a burden to carry. The most wonderful thing about their wealth is that the more your spend, the more it grows.*

मतिरेव बलाद्गरीयसी यदभावे करिणामियं दशा।
इति घोषयतीव डिण्डिमः करिणो हस्तिपकाहतः क्वणन्।।

Matireva balaad gareeyasi yadabhaave karinaamiyam Dasaa
Iti ghoshayateeva Dinohimah Karino hastipakaahatah kvanan

*On seeing the pitiable condition on of the elephant brought under the center of a mahout, one indeed has to say that intelligence is for emperor to physical strength the elephant suffers for want of it This is probably the message that is proclaimed by the sound of the drum, beaten by the mahout.*

*-Compiled by* **Mrs. Janaki S. Mani**
*Mumbai*

## ಸುತ್ತ ಮುತ್ತ

### ಡಾ. ಉಪಾಧ್ಯ ಅವರ ಕೃತಿ ಬಿಡುಗಡೆ

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಜಿ.ಎನ್. ಉಪಾಧ್ಯ ಅವರ ಸಂಶೋಧನ ಕೃತಿ ಮಹಾರಾಷ್ಟ್ರದ ಕನ್ನಡ ಶಾಸನಗಳ ವರ್ಣನಾತ್ಮಕ ಸೂಚಿಯನ್ನು ತರಂಗ ಪತ್ರಿಕೆಯ ಸಂಪಾದಕಿ ಶ್ರೀಮತಿ ಸಂಧ್ಯಾ ಎಸ್. ಪೈ ಅವರು ಇತ್ತೀಚೆಗೆ ಬಿಡುಗಡೆ ಗೊಳಿಸಿದರು. ಅಭಿಜಿತ್ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಿದೆ. ಇದೊಂದು ಮಹತ್ವದ ಸಂಶೋಧನ ಕೃತಿ. ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳ ಪ್ರಾಚೀನ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿದೆ. ಕನ್ನಡಿಗರ ಸಾಧನೆಯ ಸಾಕ್ಷಿಯಾಗಿ ಈ ಕೃತಿ ಮೂಡಿ ಬಂದಿದೆ ಎಂದು ಕೃತಿ ಪರಿಚಯ ಮಾಡಿದ ಶಿಕ್ಷಣ ತಜ್ಞೆ ಶ್ರೀಮತಿ ಸುಮನ್ ಚಿಪ್ಳೂಣ್‌ಕರ್ ಅವರು ನುಡಿದರು. ಅಧ್ಯಕ್ಷತೆ ವಹಿಸಿದ್ದ ಡಾ. ಶಾರದಾ ಗದ್ವಾಲ್ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ನಡುವಿನ ಆದಾನ ಪ್ರದಾನವನ್ನು ತಿಳಿದುಕೊಳ್ಳಲು ಈ ಕೃತಿ ನಮ್ಮ ನೆರವಿಗೆ ಬರುತ್ತದೆ ಎಂದು ಅಭಿಪ್ರಾಯಪಟ್ಟರು. ಸತೀಶ್ ಪೈ, ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ಅಧ್ಯಕ್ಷ ಎಚ್.ಬಿ.ಎಲ್. ರಾವ್, ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಲಾವಿದೆ ಅಹಲ್ಯಾ ಬಲ್ಲಾಳ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಈ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಆಯೋಜಿಸಿತ್ತು.

### ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ವತಿಯಿಂದ ವಿಶೇಷ ಕಾರ್ಯಕ್ರಮಗಳು

ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಇತ್ತೀಚೆಗೆ ಗೋಕುಲ ಸಭಾಗೃಹದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆ, ಕೃತಿ ಸಮೀಕ್ಷೆ ಸಂವಾದ ಹಾಗೂ ವಿಶೇಷ ಕಾರ್ಯಕ್ರಮ ಗಳನ್ನು ಏರ್ಪಡಿಸಲಾಗಿತ್ತು.

ಕನ್ನಡ ನಾಡಿನ ಶ್ರೇಷ್ಠ ವಾಗ್ಮಿ, ಗಾಂಧಿವಾದಿ, ವಿದ್ವಾಂಸ ಡಾ. ಮತ್ತೂರು ಕೃಷ್ಣಮೂರ್ತಿ ಅವರು ರಾಮಾಯಣ ಕಾವ್ಯದ ಮಹತ್ವವನ್ನು ಸೋದಾಹರಣ ವಾಗಿ ವಿವರಿಸಿದರು. ಉಪನಿಷತ್ತುಗಳ ವೈಶಿಷ್ಟ್ಯವನ್ನು ವಿದ್ವಾನ್ ಉಡುಪಿ ರಾಮನಾಥ ಆಚಾರ್ಯ ಅವರು ತಮ್ಮ ಉಪನ್ಯಾಸದಲ್ಲಿ ಮನಮುಟ್ಟುವಂತೆ ವಿವರಿಸಿದರು.

ಕುವೆಂಪು ಶತಮಾನೋತ್ಸವ ಮಾಲಿಕೆಯಲ್ಲಿ ಪ್ರಕಟವಾದ ಮಹಾರಾಷ್ಟ್ರ ಕನ್ನಡ ಕಥಾಸಂಕಲನ ಕೃತಿಯ ಸಮೀಕ್ಷಾ ಕಾರ್ಯಕ್ರಮವನ್ನು ಇದೇ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಜಿ.ಎನ್. ಉಪಾಧ್ಯ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಲಕ್ಷ್ಮೀ ಜೋಶಿ, ಉತ್ತಮ ನಾಯಕ್, ಸಾ. ದಯಾ, ವಿಶ್ವನಾಥ ಶೆಟ್ಟಿ ಅವರು ಈ ಕೃತಿಯ ಕಥೆಗಳ ವೈಶಿಷ್ಟ್ಯವನ್ನು ವಿವರಿಸಿದರು. ಕ.ಸಾ.ಪ. ಮಹಾರಾಷ್ಟ್ರ ಘಟಕದ ಅಧ್ಯಕ್ಷ ಎಚ್. ಬಿ. ಎಲ್. ರಾವ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಕರುಣಾಕರ ಶೆಟ್ಟಿ ಅವರು ಅತಿಥಿಗಳನ್ನು ಸ್ವಾಗತಿಸಿದರು. ಜಿ.ಟಿ. ಆಚಾರ್ಯ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಇದೇ ಸಂದರ್ಭದಲ್ಲಿ ಉದಯವಾಣಿ ಮತ್ತು ಸಹೋದರ ಪತ್ರಿಕೆಗಳ ಸಂಪಾದಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಲಾಗಿತ್ತು. ತರಂಗ ಪತ್ರಿಕೆಯ ಸಂಪಾದಕಿ ಸಂಧ್ಯಾ ಪೈ, ಉದಯವಾಣಿ ಪತ್ರಿಕೆಯ ಸಂಪಾದಕ ಸತೀಶ್ ಪೈ, ಉಪಸಂಪಾದಕ ಶಿವ ಕುಮಾರ್, ಲಕ್ಷ ಪತ್ರಿಕೆಯ ಸಂಪಾದಕ ಸಾಹಿತಿ ಎಂ. ಬಿ. ಕುಕ್ಯಾನ್, ಡಾ. ಜೀವಿ ಕುಲಕರ್ಣಿ, ಗೋಪಾಲ ತ್ರಾಸಿ, ಮಮತಾ ರಾವ್ ಮೊದಲಾದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮತ್ತೂರು ಕೃಷ್ಣಮೂರ್ತಿ ಅವರ ಬೃಹತ್ ಕೃತಿ, ಮೂಲ ರಾಮಾಯಣದ ವಿಶ್ಲೇಷಣೆಯನ್ನು ಒಳಗೊಂಡ ಗ್ರಂಥವನ್ನು ಶ್ರೀ ವಿಶ್ವಪ್ರಸನ್ನ ತೀರ್ಥರು ಹಾಗೂ ಡಾ. ಜಿ. ಎನ್. ಉಪಾಧ್ಯ ಅವರ ಮಹಾರಾಷ್ಟ್ರದ ಕನ್ನಡ ಶಾಸನಗಳ ವರ್ಣನಾತ್ಮಕ ಸೂಚಿ ಕೃತಿಯನ್ನು ತರಂಗದ ಸಂಪಾದಕಿ ಸಂಧ್ಯಾ ಪೈ ಅವರು ಬಿಡುಗಡೆಗೊಳಿಸಿದರು. ಕೃತಿಯ ಬಗೆಗೆ ಸುಮನ್ ಚಿಪ್ಳೂಣ್‌ಕರ್ ಅವರು ಮಾತನಾಡಿದರು. ಡಾ. ಶಾರದಾ ಗದ್ವಾಲ್ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅನಂತರ ನಡೆದ ಆರೋಗ್ಯ ಸತ್ಸಂಗ ಕಾರ್ಯಕ್ರಮ ಡಾ. ಸದಾನಂದ ಶೆಟ್ಟಿ ಅವರ ನೇತೃತ್ವದಲ್ಲಿ ನಡೆಯಿತು. ಅಹಲ್ಯಾ ಬಲ್ಲಾಳ, ಗೀತಾ ಭಟ್, ಚಂದ್ರಾವತಿ ರಾವ್, ಶೈಲಿನಿ ರಾವ್ ಮೊದಲಾದವರು ಸಹಕರಿಸಿದರು. ಕಥಾ ಸಂಕಲನಕ್ಕೆ ಕತೆಗಳನ್ನು ಬರೆದುಕೊಟ್ಟ ಲೇಖಕರಿಗೆ ಇದೇ ಸಂದರ್ಭದಲ್ಲಿ ಗ್ರಂಥ ಗೌರವ ನೀಡಿ ಸತ್ಕರಿಸಲಾಯಿತು.

### ಕರ್ನಾಟಕ ಸಂಘದಲ್ಲಿ ‘ವೈದ್ಯಕೀಯ ಗೋಷ್ಠಿ’

ಕರ್ನಾಟಕ ಸಂಘ, ಮುಂಬಯಿಯು ವಜ್ರ ಮಹೋತ್ಸವ ವರ್ಷ ಆಚರಿಸುತ್ತಿರುವ ವಿಶ್ವಕರ್ಮ ಅಸೋಸಿಯೇಶನ್‌ನ ಸಹಭಾಗಿತ್ವದಲ್ಲಿ ಡಾ. ಕೆ. ಮೋಹನ್ ವೈದ್ಯಕೀಯ ದತ್ತಿನಿಧಿ ಕಾರ್ಯಕ್ರಮದಲ್ಲಿ ವೈದ್ಯಕೀಯ ಗೋಷ್ಠಿಯನ್ನು ಇತ್ತೀಚೆಗೆ ಆಯೋಜಿಸಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಖ್ಯಾತ ಶಿಶು ತಜ್ಞ ಡಾ. ಕೆ. ಮೋಹನ್ ಅವರು ಸಾಂತೂರು ಜನಾರ್ಧನ ಆಚಾರ್ಯರವರ ಕೃತಿ ‘ಇಂಗ್ಲೀಷ್ ಸ್ಪೀಕಿಂಗ್ ಮೇಡ್ ಈಸಿ ಥ್ರೋ ನ್ಯೂ ಟೆಕ್ ನಿಕ್ಸ್’ನ್ನು ಬಿಡುಗಡೆಗೊಳಿಸಿದರು. ಅವರು ಮಾತನಾಡುತ್ತಾ ವೈದ್ಯಕೀಯ ಗೋಷ್ಠಿಯಲ್ಲಿ ಅನೇಕ ಮಾಹಿತಿಗಳು ಲಭ್ಯವಾಗಲಿದ್ದು ಪ್ರಥಮ ಚಿಕಿತ್ಸೆಗೆ ಬೇಕಾದ ಸಲಹೆಗಳನ್ನು ತಿಳಿಯಬಹುದಾಗಿದೆ. ಡಾಕ್ಟರ್‌ರಲ್ಲಿಗೆ ಹೋಗಲು ಅನಾನುಕೂಲತೆ ಇದ್ದವರಿಗೆ ಇಂತಹ ಗೋಷ್ಠಿಗಳು ತುಂಬಾ ಪ್ರಯೋಜನಕಾರಿಯಾಗಿದೆ ಎಂದು ತಿಳಿಸಿದರು.

ಉಪನ್ಯಾಸದ ವಿಷಯಗಳಾದ ‘ಹೃದಯಾಘಾತ ಮತ್ತು ಮಧುಮೇಹ’ ಮತ್ತು ಗ್ಯಾಂಗ್ರೀನ್ ಹಾಗೂ ಶಸ್ತ್ರ ಚಿಕಿತ್ಸೆ ವಿಷಯ ಕುರಿತಾಗಿ ಉಪನ್ಯಾಸಕರಾರು ಡಾ. ದಯಾನಂದ ಕುಂಬ್ಳೆ ಮತ್ತು ಡಾ. ಪ್ರಭಾಕರ ಶೆಟ್ಟಿಯವರು ದೃಶ್ಯ ಮಾಧ್ಯಮ ಪ್ರಾತ್ಯಕ್ಷಿಕೆಯ ಮೂಲಕ ಸವಿಸ್ತಾರವಾಗಿ ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಕರ್ನಾಟಕ ಸಂಘ, ಮುಂಬಯಿಯ ಉಪಾಧ್ಯಕ್ಷ ಭರತ್‌ಕುಮಾರ್ ಪೊಲಿಪುರವರು ಮಾತನಾಡುತ್ತಾ ದೈಹಿಕ ಆರೋಗ್ಯ ಕಾಪಾಡಲು ಇಂತಹ ಗೋಷ್ಠಿಗಳನ್ನು ಇನ್ನು ಮುಂದೆಯೂ ನಡೆಸಲು ಸಂಘವು ನಿರ್ಧರಿಸಿದೆ. ಸಂಘವು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾನಸಿಕ ಆರೋಗ್ಯ ಕಾಪಾಡಲು ಅರ್ಥಪೂರ್ಣ ರೀತಿಯಲ್ಲಿ ನಡೆಸುತ್ತಾ ಬಂದಿದೆ ಎಂದು ತಿಳಿಸಿದರು.

ಕರ್ನಾಟಕ ವಿಶ್ವಕರ್ಮ ಅಸೋಸಿಯೇಶನ್ ಅಧ್ಯಕ್ಷ ಜಿ.ಟಿ. ಆಚಾರ್ಯರವರು ಗೌರವ ಅತಿಥಿಯ ಸ್ಥಾನದಿಂದ ಮಾತನಾಡುತ್ತಾ ಇಂತಹ ದತ್ತಿನಿಧಿ ಗೋಷ್ಠಿಗಳು ಜನ ಸಾಮಾನ್ಯರಿಗೂ ಸ್ಪಂದಿಸುವಂತಿರಬೇಕು. ಇಂದಿನ ಗೋಷ್ಠಿಯು ಅರ್ಥಪೂರ್ಣವಾಗಿದೆ ಎಂದು ತಿಳಿಸಿದರು.

ಡಾ. ಕೆ. ಮೋಹನ್ ಅವರನ್ನು ಭರತ್‌ಕುಮಾರ್ ಪೊಲಿಪುರವರು ಪುಷ್ಪಗುಚ್ಛ ನೀಡಿ ಗೌರವಿಸಿದರೆ ಜಿ.ಟಿ. ಆಚಾರ್ಯ ಮತ್ತು ವಿಶ್ವಕರ್ಮ ಅಸೋಸಿಯೇಶನ್ ಉಪಾಧ್ಯಕ್ಷ ದಾಮೋದರ ವಿ. ಆಚಾರ್ಯರು ಉಪನ್ಯಾಸಕಾರರಿಗೆ ಪುಷ್ಪಗುಚ್ಛ ನೀಡಿ ಗೌರವಿಸಿದರು. ಕಾರ್ಯಕ್ರಮವು ಕೃಷ್ಣ ಆಚಾರ್ಯ ಮತ್ತು ಬಳಗದವರ ಪ್ರಾರ್ಥನೆಯಿಂದ ಆರಂಭವಾಯಿತು.

ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಕಾರ್ಯಕ್ರಮವನ್ನು ನಿರ್ವಹಿಸಿ ವಂದನಾರ್ಪಣೆ ಗೈದರು.

### ಕನ್ನಡ ಲೇಖಕರಿಗೆ ಹಾಗೂ ಕವಿಗಳಿಗೆ ಆಹ್ವಾನ ಸುದ್ದಿ

ದಿ ಯಂಗ್ ಮೆನ್ಸ್ ಎಜ್ಯುಕೇಶನ್ ಸೊಸಾಯಿಟಿಯ ಅಮೃತಮಹೋತ್ಸವದ ಅಂಗವಾಗಿ "**ಕವನ ಹಾಗೂ ಕಥಾ ಸ್ಪರ್ಧೆ**"ಯನ್ನು ಏರ್ಪಡಿಸಲು ನಿಶ್ಚಯಿಸಿದೆ. ಕನ್ನಡದ ಕವಿ/ಕಥೆಗಾರರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ನಿರ್ಣಾಯಕರಿಂದ ಪರಿಗಣಿಸಲ್ಪಟ್ಟ ಉತ್ತಮ ಕವನ / ಕಥೆಗಳಿಗೆ ಈ ಕೆಳಗಿನಂತೆ ಬಹುಮಾನಗಳನ್ನು ನೀಡಲಾಗುವುದು.

ಪ್ರಥಮ ಬಹುಮಾನ ತಲಾ ರೂಪಾ. 1000/-, ದ್ವಿತೀಯ 750/-, ತೃತೀಯ ಬಹುಮಾನ 500/-

ಈ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕೆಳಗಿನ ಕ್ರಮನಿಬಂಧನೆ ಗಳಿಗೆ ಬದ್ಧರಾಗಿರಬೇಕು.

1) ಸ್ಪರ್ಧೆಗೆ ಕಳುಹಿಸುವ ಕವನ/ಕಥೆ ಸ್ವಂತದ್ದಾಗಿದ್ದು ಯಾವುದೇ ಭಾಷೆಯಿಂದ ಭಾಷಾಂತರವಾಗಿರಬಾರದು ಹಾಗೂ ಈ ಮೊದಲು ಪ್ರಕಟವಾಗಿರಬಾರದು. 2) ಕಥೆಯು ಫುಲ್‌ಸ್ಕೇಪ್ ಕಾಗದದಲ್ಲಿ 5 ಪುಟಗಳಿಗೆ ಮೀರಬಾರದು. 3) ಕಥೆಯನ್ನು ಸ್ಪಷ್ಟವಾಗಿ ಫುಲ್‌ಸ್ಕೇಪ್ ಕಾಗದದ ಒಂದೇ

ಮಗ್ಗುಲಲ್ಲಿ ಬರೆಯತಕ್ಕದ್ದು. 4) ಕವನ / ಕಥೆಗಾರರ ಪೂರ್ಣ ಹೆಸರು ಮತ್ತು ವಿಳಾಸಗಳನ್ನು ಬೇರೆಯೇ ಬರೆದು ಕವನ / ಕಥೆಗೆ ಲಗ್ತೀಕರಿಸಬೇಕು 5) ಕವನ / ಕಥೆಗಳನ್ನು ಕಳುಹಿಸುವ ಲಕೋಟೆಯ ಎಡಬದಿಯಲ್ಲಿ ''ದಿ ಯಂಗ್‌ಮೆನ್ಸ್ ಎಜುಕೇಶನ್ ಸೊಸಾಯಿಟಿಯ ವಜ್ರ ಮಹೋತ್ಸವ ಕವನ / ಕಥಾ ಸ್ಪರ್ಧೆಗಾಗಿ'' ಎಂದು ಬರೆದಿರಬೇಕು. 6) ಸ್ಪರ್ಧೆಗೆ ಕಳುಹಿಸುವ ಕವನ / ಕಥೆಗಳನ್ನು ಹಿಂದಿರುಗಿಸಲಾಗದು. ಆದ್ದರಿಂದ ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಕವನ / ಕಥೆಯ ಪ್ರತಿಯನ್ನು ತಮ್ಮಲ್ಲಿ ಇರಿಸಿಕೊಳ್ಳತಕ್ಕದ್ದು. 7) ಕವನ / ಕಥೆಗಳು ತಾ. 30-6-05ರ ಒಳಗೆ ನಮ್ಮ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕು. ಆಮೇಲೆ ತಲುಪಿದ ಕವನ/ ಕಥೆಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ. ಬಹುಮಾನ ಪಡೆದು ಪ್ರಕಟಿಸಲು ಯೋಗ್ಯವಾದ ಕೃತಿಗಳನ್ನು ವಜ್ರಮಹೋತ್ಸವದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಇದರ ಬಗ್ಗೆ ಅಂತಿಮ ನಿರ್ಧಾರ ನಿರ್ಣಾಯಕರದ್ದು.

ವಿಳಾಸ : *Hon. Gen. Secretary*

**The Young Men's Education Society**
Ida Mansion, 2nd Floor, 18, Vaju Kotak Marg,
Mumbai-400 001.

## ಬಿ.ಎ.ಎನ್. ಉಪಾಧ್ಯರಿಗೆ ದಿಲ್ಲಿಯಲ್ಲಿ ಶ್ರದ್ಧಾಂಜಲಿ

ಕೋಟೇಶ್ವರದಲ್ಲಿ ಮಾ. 24ರಂದು ನಿಧನರಾದ ಲೇಖಕ, ಕವಿ, ಯಕ್ಷಗಾನ ಪ್ರಸಂಗಕರ್ತ, ಕಲಾವಿದ ಬಿ.ಎ.ಎನ್. ಉಪಾಧ್ಯರಿಗೆ ದಿಲ್ಲಿಯಲ್ಲಿ ಕನ್ನಡ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಕಾರ್ಯಕರ್ತರು ಎ. 2ರಂದು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ವಿಷ್ಣು ರಹಸ್ಯ, ಗರುಡ ಪುರಾಣದಂತಹ ಮಹಾ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದ ಉಪಾಧ್ಯರು ಕನ್ನಡ ಕಾವ್ಯಸತ್ವವನ್ನು ಗ್ರಾಮಾಂತರ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆಂದರಲ್ಲದೆ 'ಶೂನ್ಯದಿಂದ ಅನಂತ' ಗದ್ಯ ಕೃತಿ ರಚಿಸಿ ಗಮನ ಸೆಳೆದಿದ್ದು, ಚಾಣಕ್ಯತಂತ್ರ, ವಿದಿಲೀಲೆ ಮುಂತಾದ ಯಕ್ಷಗಾನ ಪ್ರಸಂಗ ರಚಿಸಿದ ಉಪಾಧ್ಯರು ಯಕ್ಷಗಾನ ರಂಗಕ್ಕೂ ಸೇವೆ ಸಲ್ಲಿಸಿದ್ದರೆಂದರು. ವಿವಿಧ ಪ್ರಶಸ್ತಿ, ಸನ್ಮಾನಗಳಿಗೆ ಪಾತ್ರರಾಗಿದ್ದ ಉಪಾಧ್ಯ ಅವರನ್ನು ದಿಲ್ಲಿಯಲ್ಲಿ ಎಪ್ರಿಲ್ 9-10ರಂದು ನಡೆಯಲಿರುವ 22ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಮರಣೋತ್ತರ ಸನ್ಮಾನಿಸಲಾಗುವುದೆಂದು ಪ್ರಕಟಿಸಿದ ಸಾಮಗ ಅವರು ಉಪಾಧ್ಯರ ಕನ್ನಡ ಸೇವೆ ಕುರಿತು ದಿಲ್ಲಿಯಲ್ಲಿ ವಿಚಾರ ಸಂಕಿರಣವೇರ್ಪಡಿಸಿ ಉಪಾಧ್ಯರ ಸ್ಮಾರಕಕ್ಕೆ ಕ್ರಮ ಕೈಗೊಳ್ಳಲಾಗುವುದೆಂದರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮಾಜಿ ಮುಖ್ಯಗ್ರಂಥಪಾಲಕ ಬಿ. ನಾರಾಯಣ ರಾವ್ ಅವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸ್ವತಃ ಗ್ರಂಥ ಬರೆದು ಪ್ರಕಟಿಸಿ ಕನ್ನಡ ಸೇವೆ ಗೈದ ಉಪಾಧ್ಯರು ಆದರ್ಶ ವ್ಯಕ್ತಿಯಾಗಿರುವೆಂದರಲ್ಲದೆ ಹೊರನಾಡಿನ ಮುಖ್ಯ ಗ್ರಂಥಾಲಯಗಳಿಗೆ ಉಪಾಧ್ಯರ ಕೃತಿಗಳನ್ನು ನೀಡಿ ಉಪಾಧ್ಯರ ಸೇವೆಯನ್ನು ಕನ್ನಡಿಗರು ಸದಾ ಸ್ಮರಿಸಿಕೊಳ್ಳಬೇಕೆಂದರು.

ಇದೇ ಸಂದರ್ಭದಲ್ಲಿ ಉಪಾಧ್ಯರ ಕೃತಿಗಳ ಪ್ರದರ್ಶನ ಏರ್ಪಡಿಸಲಾಗಿದ್ದಿತು.

## ದಿಲ್ಲಿಯಲ್ಲಿ ನಡೆದ 22ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

ದಿಲ್ಲಿಯಲ್ಲಿ ಎಪ್ರಿಲ್ 9 ಮತ್ತು 10ರಂದು 22ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. 'ದೆಹಲಿ ಕನ್ನಡಿಗ' ಪತ್ರಿಕೆ ಏರ್ಪಡಿಸಿದ್ದ ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿ ಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತಲ್ಲದೆ ದೇಶದಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು, ಕನ್ನಡ ಸಂಘ - ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗದ ಸದಸ್ಯರೂ, ಸುಪ್ರೀಂ ಕೋರ್ಟಿನ ವಿಶ್ರಾಂತ ನ್ಯಾಯಾಧೀಶರೂ ಆದ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಅವರು ಕನ್ನಡಿಗರು ಕನ್ನಡ ಭಾಷಾ ಸಂಸ್ಕೃತಿಯನ್ನು ಬೆಳೆಸಬೇಕೆಂದು ಕರೆ ನೀಡಿದ್ದರಲ್ಲದೆ ಸರಳ ಭಾಷೆಯಲ್ಲಿ ಕನ್ನಡ ಸಾಹಿತ್ಯ ರಚಿಸಿ ನೂತನ ಸಮಾಜವನ್ನು ಕಟ್ಟಿ ಕನ್ನಡಿಗರ ಹಿತ ಸಾಧಿಸಬೇಕೆಂದರು.

ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಕನ್ನಡಕ್ಕೆ ಇನ್ನೂ ಹೆಚ್ಚಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾನ್ಯತೆ ದೊರಕಿಸಿ ಕನ್ನಡಿಗರಿಗೆ ಎಲ್ಲಾ ರಂಗಗಳಲ್ಲಿ ಸರಿಯಾದ ನ್ಯಾಯ ಸಿಗುವಂತೆ ಮಾಡುವುದೆ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆಯಲ್ಲದೆ ಇದಕ್ಕಾಗಿ ಕೇಂದ್ರ ಸರ್ಕಾರ ನನೆಗುದಿಯಲ್ಲಿರುವ ಕರ್ನಾಟಕದ ಎಲ್ಲಾ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತಗೊಳಿಸಬೇಕೆಂದು ಆಗ್ರಹ ಪಡಿಸಿದರು.

ದೆಹಲಿ ಕನ್ನಡಿಗ ವಿಶೇಷ ಸಂಚಿಕೆ ಬಿಡುಗಡೆ ಮಾಡಿದ ಮಾಜಿ ರಕ್ಷಣಾ ಸಚಿವ ಜಾರ್ಜ್ ಫೆರ್ನಾಂಡಿಸ್ ಅವರು 'ದೆಹಲಿ ಕನ್ನಡಿಗ' ಪತ್ರಿಕೆ ಸಮ್ಮೇಳನ ಏರ್ಪಡಿಸಿ ಕನ್ನಡ ಸಂಸ್ಕೃತಿಗೆ ರಾಷ್ಟ್ರಮಟ್ಟದಲ್ಲಿ ಕೀರ್ತಿ ತಂದಿದೆ ಎಂದರಲ್ಲದೆ ಪತ್ರಿಕೋದ್ಯಮ ಕನ್ನಡಿಗರ ಹಿತ ಸಾಧಿಸುವಲ್ಲಿ ಅಗ್ರ ಪಾತ್ರವಹಿಸಿದೆ ಎಂದರು. ಸಮ್ಮೇಳನದ ವಿವಿಧ ಕಾರ್ಯಕ್ರಮಗಳನ್ನು ಪ್ರಧಾನಿಯ ಆರ್ಥಿಕ ಸಲಹಾ ಮಂಡಲಿಯ ಮಾಜಿ ಸದಸ್ಯ ಡಾ. ಜಗದೀಶ್ ಶೆಟ್ಟಿಗಾರ್, ಅಖಿಲ ಭಾರತ ಬಿಲ್ಲವ ಯೂನಿಯನ್ನಿನ ಅಧ್ಯಕ್ಷ ನವೀನ್‌ಚಂದ್ರ ಡಿ. ಸುವರ್ಣ, ಕರ್ನಾಟಕದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಕೆ. ಆರ್. ನಾಗರಾಜ, ಅಖಿಲ ಭಾರತ ಕನ್ನಡ ರಂಗಕರ್ಮಿಗಳ ಒಕ್ಕೂಟದ ಅಧ್ಯಕ್ಷ ಎನ್. ರಾಮರೆಡ್ಡಿ ಅವರುಗಳು ಉದ್ಘಾಟಿಸಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಲೇಖಕರೂ, ತಿರುಪತಿ ಸಂಸ್ಕೃತ ವಿದ್ಯಾಪೀಠದ ಕುಲಾಧಿಪತಿಗಳೂ ಆದ ಡಾ. ವಿ. ಆರ್. ಪಂಚಮುಖಿ ಅವರು ಕರ್ನಾಟಕ ಅಭಿವೃದ್ಧಿಗೊಳಿಸಲು ಹೊಸ ಯೋಜನೆಗಳನ್ನು ರೂಪಿಸುವುದರೊಂದಿಗೆ ನಂಜುಂಡಪ್ಪ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದರಲ್ಲದೆ ವಿಶ್ವದಲ್ಲಿರುವ ವಿಜ್ಞಾನಿ ಮತ್ತು ತಂತ್ರಜ್ಞಾನಿಗಳ ಕರ್ನಾಟಕ ವೇದಿಕೆ ಸ್ಥಾಪಿಸಿ ಪ್ರಗತಿಗೊಳಿಸಬೇಕೆಂದೂ, ಕನ್ನಡದಲ್ಲಿ ವಿಜ್ಞಾನ ಸಾಹಿತ್ಯವನ್ನು ಭಾಷಾಂತರ ಮೂಲಕ ಬೆಳೆಸಬೇಕೆಂದರು.



*ಚಿತ್ರದಲ್ಲಿ ಶಿವರಾಜ್ ವಿ. ಪಾಟೀಲ್ ಅವರು 'ದೀಪ ಬೆಳಗಿಸಿ ಸಮ್ಮೇಳನ ಉದ್ಘಾಟಿಸುತ್ತಿದ್ದಾರೆ. ಚಿತ್ರದಲ್ಲಿ ಬಾ. ಸಾಮಗ, ಕೆ. ಎಸ್. ಭಟ್, ನವೀನಚಂದ್ರ ಡಿ. ಸುವರ್ಣ, ಡಾ. ವಿ. ಆರ್. ಪಂಚಮುಖಿ, ಜಾರ್ಜ್ ಫೆರ್ನಾಂಡಿಸ್, ಎನ್. ರಾಮ ರೆಡ್ಡಿ, ಡಾ. ಜಗದೀಶ್ ಶೆಟ್ಟಿಗಾರ್ ಅವರನ್ನೂ ಕಾಣಬಹುದು.*

No. TECH/47-202/MBI/2003-05
Date of Posting : 10-05-2005

ಹೊಸ ಬಾನಂಗಳದಿ
ಹೊಸ ರಾಗವ ಹಾಡುತ
ಮೈಮನ ಪುಳಕಿತ
ಸಮರಸ ಬದುಕಿಗೆ ಸಂತಸ ತರುತ
ಮತ್ತೆ ಬಂದಿತು **ಯುಗಾದಿ**

**ಶ್ರೀ ಪಾರ್ಥಿವ ನಾಮ ಸಂವತ್ಸರದ ಈ ಶುಭ ಸಂದರ್ಭದಲ್ಲಿ ಸುಖ, ಶಾಂತಿ ನೆಮ್ಮದಿಯ ಬದುಕಿಗಾಗಿ ಮೂಡಿಬಂದ ಯೋಜನೆಗಳು**

★ ಪ್ರಕೃತಿ ಮಾತೆಯೊಂದಿಗೆ ಮಿಳಿತಗೊಂಡು ಎಲ್ಲರಿಗೂ ಅನ್ನದಾತನಾಗಿರುವ ರೈತನ ಕುಶಲತೆಯೇ ಸರ್ಕಾರದ ಸಫಲತೆ. ಈ ದಿಶೆಯಲ್ಲಿ ನಮ್ಮ ಹೊಲ - ನಮ್ಮ ತೋಟ, ಗಂಗಾ ಕಲ್ಯಾಣ, ಯಶಸ್ವಿನಿ, ಬೆಳೆ ವಿಮೆ ಯೋಜನೆಗಳ ಸಾಕಾರ.

★ ನಮ್ಮ ಮೈಗೆ ಹಿತವಾದ ಉಡುಪು ನೀಡುತ್ತಾ ನೇಯ್ಗೆಯಲ್ಲಿ ನಿರತಾಗಿರುವ ನೇತಾರ ನಮ್ಮ ನೇಕಾರ. ನೇಯ್ಗೆ ನಿರಾತಂಕವಾಗಿರಲು ವಿದ್ಯುತ್ ಸಹಾಯಧನ, ಆರೋಗ್ಯ ರಕ್ಷಣೆ, ಕಚ್ಚಾ ವಸ್ತುಗಳ ಪೂರೈಕೆ ನೆರವು.

★ ಅಭಿವೃದ್ಧಿಯಲ್ಲಿ ಸಮತೋಲನ ತರಲು ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಕೈಗಾರಿಕ ವಿಕಾಸ ಸೇವೆ. ಹೊಸ ವರ್ಷದ ಮುಂಬರುವ ದಿನಗಳಲ್ಲಿ 30,000 ಜನರಿಗೆ ಉದ್ಯೋಗಾವಕಾಶ.

★ ಇಂದಿನ ಮಕ್ಕಳೇ ನಾಳಿನ ನಾಗರೀಕರಲ್ಲವೇ. ಅವರಿಗಾಗಿ ಶಾಲೆಗಳಲ್ಲಿ ಇಕೋ ಕ್ಲಬ್‌ಗಳು, ಪರಿಸರ ಸಂರಕ್ಷಣೆಯ ಪಾಠ.

★ ಪ್ರವಾಸವೆಂದರೇ ಅನಂದಾನುಭವ ಎನ್ನುವಂತಾಗಲು ಸುವರ್ಣ ಕರ್ನಾಟಕ ಪ್ರವಾಸಿ ತಾಣ ಯೋಜನೆ. ಆಯ್ದ ಸ್ಥಳಗಳಲ್ಲಿ ಮೂಲ ಸೌಕರ್ಯ ತಾಣ.

★ ಸುವರ್ಣ ಕರ್ನಾಟಕ - ಕರ್ನಾಟಕ ರಾಜ್ಯದ 50 ಸಾರ್ಥಕ ಸಂವತ್ಸರಗಳ ಕುರುಹು. ಇದರ ಸವಿನೆನಪಿನಲ್ಲಿ ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ. ಖ್ಯಾತ ಕನ್ನಡ ಸಾಹಿತಿಗಳ ಕೃತಿಗಳ ಭಾಷಾಂತರ.

★ ಗ್ರಾಮೀಣ ಬದುಕು ಸರ್ವಾಂಗ ಸುಂದರವಾಗಿರಿಸಲು ಪಂಚಸೂತ್ರದ ಸ್ವಚ್ಛ ಗ್ರಾಮ, ಕುಗ್ರಾಮ ಸುಗ್ರಾಮ, ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ನಿಧಿ.

★ ಅಲ್ಪ ಸಂಖ್ಯಾತರಿಗಾಗಿ ಶಾದಿ ಮಹಲ್. ನಿರುದ್ಯೋಗಿ ಮಹಿಳೆಯರಿಗಾಗಿ ಕೌಶಲ್ಯ, ಹಿಂದುಳಿದ ವರ್ಗಗಳಿಗಾಗಿ ಶ್ರಮ ಶಕ್ತಿ.

**ಯುಗಾದಿಯ ಬೇವು ಬೆಲ್ಲ ತಿಂದು**

**ನಮ್ಮಾಶಯಗಳಿಗೆ ಯಶ ತರಲೆಂದು ಹಾಡೋಣ ಬಂಧು.**

## ಸುವರ್ಣ ಕರ್ನಾಟಕ ವರ್ಷ - 2005-07

ಕರ್ನಾಟಕ ವಾರ್ತೆ

Edited, Printed & Published by M.A.N. Prasad, On behalf of the Mysore Association, Mumbai. Tel : 2402 4647 ● Fax : 2401 0574